ಜನಮನದ ದನಿ

# ಪ್ರಜೋದಯ


ಸಂಪಾದಕ : ಜೆ.ಆರ್. ಕೆಂಚೇಗೌಡ

02 ನವೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 232 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯ ಭಾರತ ಹಾಗು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಭಾನುವಾರ ನಡೆಯಲಿದ್ದು, ಉಭಯ ನಾಯಕರು ಟ್ರೋಫಿಯೊಂದಿಗೆ ಕಾಣಿಸಿಕೊಂಡಿದ್ದು...


ಹೇಮಂತದ ಧಾವಂತ: ಮುಗ್ಧ ಮನಸು, ಸ್ನಿಗ್ಧ ತಿನಿಸು » 2


ಸಮಾಜಕ್ಕೆ ಮಾರಕ ಹನಿಟ್ರ್ಯಾಪ್ ಘಟನೆಗಳು » 3


ಕನ್ನಡ ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಕರ್ತವ್ಯ » 4

# ಹಿಂದಿ ಹೇರಿಕೆಯಿಂದ ಕನ್ನಡ ಉಳಿವಿಗೆ ಆಪತ್ತು

## ಕೇಂದ್ರ ಸರ್ಕಾರದಿಂದ ಅಧಿಕಾರ ದುರ್ಬಳಕೆ | ರಾಜ್ಯೋತ್ಸವದಲ್ಲಿ ಸಚಿವ ಕೃಷ್ಣಬೈರೇಗೌಡ ಆಕ್ಷೇಪ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡು ಬಲವಂತವಾಗಿ ಹಿಂದಿ ಹೇರಿಕೆ ಮಾಡುತ್ತಿರುವುದು ಕನ್ನಡ ಭಾಷೆ ಉಳಿವಿಗೆ ಆಪತ್ತು ಮತ್ತು ಆತಂಕವನ್ನು ತಂದೊಡ್ಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಹೇಳಿದರು.

ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಶನಿವಾರ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ರಾಷ್ಟ್ರ ಧ್ವಜಾರೋಹಣೆ ಮತ್ತು ಭುವನೇಶ್ವರಿ ದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಪ್ರತ್ಯೇಕ್ಷ ಮತ್ತು ಪರೋಕ್ಷವಾಗಿ ಸ್ಥಳೀಯ ಭಾಷೆಗಳನ್ನು ಅದುಮಿ, ಬಲವಂತವಾಗಿ ನಮ್ಮ ಮೇಲೆ ಹಿಂದಿ ಹೇರಿಕೆ ಮೂಲಕ ಒಂದೇ ಭಾಷೆ, ಒಂದೇ ಸಂಸ್ಕೃತಿ, ಒಂದೇ ಬದುಕು ಎಂದು ಹೇಳುತ್ತಿದೆ. ಈ ಹುನ್ನಾರದ ವಿರುದ್ಧ ನಾವು ಜಾಗೃತರಾಗಬೇಕೆಂದು ಕರೆ ನೀಡಿದರು.

ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಇಂಗ್ಲೀಷ್ ಭಾಷೆಯ ವ್ಯಾಮೋಹ ಎಲ್ಲೆಡೆ ವ್ಯಾಪಿಸಿದೆ.



ನಮ್ಮ ಮಕ್ಕಳೇ ನಮ್ಮ ಭಾಷೆಯನ್ನು ಸ್ವಚ್ಛವಾಗಿ ಮಾತನಾಡಲಾಗದ ಸ್ಥಿತಿಗೆ ತಲುಪಿದ್ದಾರೆ. ನಮ್ಮ ಮನೆ ಯೊಳಗೆ ನಮ್ಮ ಭಾಷೆಯನ್ನು ಉಳಿಸಿಕೊಳ್ಳುವುದು ದಿನೇ ದಿನೇ ಕಷ್ಟವಾಗುತ್ತಿದೆ. ಇಂಗ್ಲೀಷ್ ಭಾಷೆ ಕಲಿಯಬೇಕು. ಆದರೆ, ಆ ಭಾಷೆ ಮಾತನಾಡಿದರೆ ಮಾತ್ರ ಸಮಾಜದಲ್ಲಿ ಸ್ಥಾನಮಾನ ಸಿಗುತ್ತದೆಂಬ ಕೀಳು ಮನೋಭಾವದಿಂದ ಹೊರಬರಬೇಕು. ನನ್ನ ತಾಯಿ ಯಾವಾಗಲೂ ನನ್ನ ತಾಯಿಯೇ. ಪಕ್ಕದ ಮನೆಯ ತಾಯಿ ನನ್ನ ತಾಯಿಯಾಗಲು ಸಾಧ್ಯವಿಲ್ಲ. ಆದ್ದರಿಂದ ಎಂದಿಗೂ ನಮ್ಮ ತನವನ್ನು ಬಿಟ್ಟುಕೊಡಬಾರದು. ನಮ್ಮ ಭಾಷೆಯಲ್ಲಿ ನಮ್ಮ ತನ, ನಮ್ಮ ಸಂಸ್ಕೃತಿ ಅಡಗಿದೆ ಎಂದರು.

ಕನ್ನಡದ ಬಗ್ಗೆ ಸದಾ ಜಾಗೃತಿ ಮೂಡಿಸುವ ಕೆಲಸವಾಗಬೇಕು, ನಿತ್ಯ ಕನ್ನಡದ ಕೆಲಸ ಆಗಬೇಕು. ಅದಕ್ಕೆ ಇದೇ ಸ್ಪೂರ್ತಿಯ ದಿನವಾಗಲಿ. ನಿತ್ಯ ಕನ್ನಡದ ಹಬ್ಬ ಆಚರಣೆಯಾಗಲಿ. ನಾಡು ನುಡಿ, ಸಂಸ್ಕೃತಿ, ಜಾಗೃತಿ ಒಂದು ದಿನ ನಡೆದರೆ ಏನೂ ಆಗದು, ವರ್ಷದಲ್ಲಿ ಒಂದು ದಿನಕ್ಕೆ ಅಭಿಮಾನ ಸೀಮಿತ ಆಗಬಾರದು. ಕನ್ನಡ ರಾಜ್ಯೋತ್ಸವ ಎಂಬುದು ನಿತ್ಯೋತ್ಸವ ಆಗಬೇಕು. ಕನ್ನಡದ ಬಗೆಗಿನ ಅರಿವು ನಿತ್ಯವೂ ನಡೆಯಬೇಕು. ಅದಕ್ಕಾಗಿ ಎಲ್ಲರೂ ಸಂಕಲ್ಪ ಮಾಡೋಣ ವೆಂದರು.

ಇಂದು ಕನ್ನಡಿಗರೆಲ್ಲ ಒಟ್ಟಾಗಿದ್ದು, ಸಡಗರ ಸಂಭ್ರಮದಿಂದ ಕನ್ನಡ ರಾಜ್ಯೋತ್ಸವ ಆಚರಣೆ ಮಾಡುತ್ತಿದ್ದೇವೆ. ಹಿಂದೆ ಕನ್ನಡ ಭಾಷಿಕರು ದೇಶದ ವಿವಿಧೆಡೆ ಹಂಚಿ ಹೋಗಿ ದ್ದರು. 1956ರಲ್ಲಿ ಕರ್ನಾಟಕ ಏಕೀಕರಣ, 1973ರಲ್ಲಿ ಕರ್ನಾಟಕ ಎಂದು ನಾಮಕರಣ ಆಗಿದ್ದು ಅದಕ್ಕೆ ಕಾರಣ. ಈ ಮೂಲಕ ಕನ್ನಡ, ಸಂಸ್ಕೃತಿ, ಭಾಷೆಯ ಏಕೀಕರಣ ಕೆಲಸ ಆಗಿದೆ. ರಾಷ್ಟ್ರ ಮಟ್ಟದಲ್ಲಿ ಏಕೀ ಕರಣವಾಗಲು ಜವಾಹರ ಲಾಲ್ ನೆಹರು ಅವರು ಕಾರಣ ಎಂದು ಸ್ಮರಿಸಿದರು.

ದೇವರಾಜು ಅರಸು ಅವರು ಮುಖ್ಯ ಮಂತ್ರಿಯಾಗಿದ್ದಾಗ 1973ರಲ್ಲಿ ಕರ್ನಾಟಕ ಎಂದು ನಾಮಕರಣ ಆಯಿತು. ಅದಕ್ಕೂ ಮುನ್ನ ಕನ್ನಡಿಗರು ಒಂದು ಮನೆತನ ಅವಕಾಶ ಇರಲಿಲ್ಲ. ಹರಿದು ಹಂಚಿಹೋಗಿದ್ದ ನಾಡನ್ನು ಭಾಷಾವಾರು » ನಾಲ್ಕನೇ ಪುಟದಲ್ಲಿ

### 2500 ಅಡಿ ಉದ್ದದ ಧ್ವಜ ಮೆರವಣಿಗೆ



ಕನ್ನಡ ರಾಜ್ಯೋತ್ಸವ ಅಂಗವಾಗಿ, ನಮ್ಮ ಹಾಸನ ಟಿ.ವಿ. ವತಿಯಿಂದ 2,500 ಅಡಿ ಉದ್ದದ ಕನ್ನಡ ಧ್ವಜವನ್ನು ನಗರದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು. ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಪ್ರಾರಂಭವಾದ ಮೆರವಣಿಗೆ ಜಿಲ್ಲಾ ಕ್ರೀಡಾಂಗ ಣದಲ್ಲಿ ಮುಕ್ತಾಯ ಗೊಂಡಿತು. ಮೆರವಣಿಗೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ದೇವರ ದರ್ಶನಕ್ಕಾಗಿ ನೂಕುನುಗ್ಗಲು: 10 ಜನರ ಸಾವು

• ಪ್ರಜೋದಯ ವರದಿ

**ಶ್ರೀಕಾಕುಳಂ:** ಆಂಧ್ರ ಪ್ರದೇಶದ ಶ್ರೀಕಾಕುಳಂ ಜಿಲ್ಲೆಯಲ್ಲಿರುವ ಕಾಶಿ ಬುಗ್ಗ ವೆಂಕಟೇಶ್ವರ ದೇವಸ್ಥಾನದಲ್ಲಿ ಶನಿವಾರ ಸಂಭವಿಸಿದ ಕಾಲ್ತುಳಿತದಲ್ಲಿ 10 ಜನರು ಮೃತಪಟ್ಟಿದ್ದಾರೆ.

ಘಟನೆಯಲ್ಲಿ ಹಲವರು ಗಾಯ ಗೊಂಡಿದ್ದಾರೆ. ಕಾಶಿಬುಗ್ಗ ವೆಂಕಟೇಶ್ವರ ದೇವಸ್ಥಾನದ ಬಳಿ ಬೆಳಿಗ್ಗೆ 11.30ರ ಸುಮಾರಿಗೆ ಕಾಲ್ತುಳಿತ ಸಂಭವಿಸಿದೆ. ಈ ಕುರಿತು ಆಂಧ್ರ ಪ್ರದೇಶ ಮುಖ್ಯ ಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಶ್ರೀಕಾಕುಲಂ ಜಿಲ್ಲೆಯ ಕಾಶಿಬುಗ್ಗ ವೆಂಕಟೇಶ್ವರ ದೇವಸ್ಥಾನದಲ್ಲಿ ನಡೆದ ಕಾಲ್ತುಳಿತವು ನನಗೆ ನೋವುಂಟು ಮಾಡಿದೆ. ಅಹಿತಕರ ಘಟನೆಯಲ್ಲಿ ಭಕ್ತಾಧಿಗಳು ಪ್ರಾಣ ಕಳೆದುಕೊಂಡಿರುವುದು ದುಃಖದ ಸಂಗತಿಯಾಗಿದೆ. ಮೃತರ ಕುಟುಂಬ ಗಳಿಗೆ ಸಂತಾಪ ಸೂಚಿಸುತ್ತೇನೆ. ಕಾಲ್ತುಳಿತದಲ್ಲಿ ಗಾಯಗೊಂಡಿರುವವರಿಗೆ ಉತ್ತಮ ಚಿಕಿತ್ಸೆ ಒದಗಿಸುವ ಭರವಸೆ ನೀಡಿದ್ದು, ಘಟನಾ ಸ್ಥಳದ ಮೇಲ್ವಿಚಾರಣೆಗೆ ಅಧಿಕಾರಿಗಳು ಹಾಗು ಸ್ಥಳೀಯ ನಾಯಕರಿಗೆ ಸೂಚಿಸಿದ್ದಾರೆ.

**ಸಮಗ್ರ ತನಿಖೆ ಭರವಸೆ:** ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು. ಪೊಲೀಸರಿಗೆ ಮುಂಚಿತವಾಗಿ ಮಾಹಿತಿ ನೀಡಲು ವಿಫಲವಾದ ಕಾರಣ ಸಾಕಷ್ಟು ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಲಿಲ್ಲ ಎಂದು ಸಂಘಟಕರನ್ನು ದೂಷಿಸಿದರು. ಕಾಶಿಬುಗ್ಗಾದಲ್ಲಿ ಒಬ್ಬ ವ್ಯಕ್ತಿ ವೆಂಕಟೇಶ್ವರಸ್ವಾಮಿ ದೇವಸ್ಥಾನವನ್ನು ನಿರ್ಮಿಸಿದ್ದರು. ಮಂಗಳಕರ ಕಾರ್ತಿಕ ಮಾಸದ ಸಂದ ರ್ಭದಲ್ಲಿ ದರ್ಶನ ಪಡೆಯಲು ಅನೇಕ ಭಕ್ತರು ಅಲ್ಲಿಗೆ ಹೋಗಿದ್ದರು. ದೇವಸ್ಥಾನಕ್ಕೆ ಅಪಾರ ಪ್ರಮಾಣದ ಭಕ್ತರು ಬರುವ ಸೂಚನೆ ಇದ್ದರೂ ಪೊಲೀಸರಿಗೆ ಮಾಹಿತಿ ನೀಡಿರಲಿಲ್ಲ. ಪೊಲೀಸ್ ರಕ್ಷಣೆ ಒದಗಿಸಿ ಜನಸಂದಣಿಯನ್ನು ನಿಯಂತ್ರಿಸಬಹುದಿತ್ತು. ಘಟನೆಯು ಅತ್ಯಂತ ನೋವಿನ ಮತ್ತು ಖಂಡನೀಯವಾದದ್ದಾಗಿದೆ ಎಂದು ವಿವರಿಸಿದ ಮುಖ್ಯಮಂತ್ರಿ, ಮುಗ್ಧ ಜನರು ತಮ್ಮ ಪ್ರಾಣವನ್ನು ಕಳೆದುಕೊಂಡರು. ನಾವು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸುತ್ತೇವೆ ಎಂದಿದ್ದಾರೆ.

## ತಂದೆಯಿಂದಲೇ ಮದ್ಯವ್ಯಸನಿ ಮಗನ ಕೊಲೆ

• ಪ್ರಜೋದಯ ವರದಿ



**ಹಾಸನ:** ಮದ್ಯ ಸೇವನೆಗೆ ಹಣ ನೀಡುವಂತೆ ಪೀಡಿಸುತ್ತಿದ್ದ ಮಗನನ್ನು ತಂದೆಯೇ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿರುವ ಘಟನೆ ಶುಕ್ರವಾರ ರಾತ್ರಿ ತಾಲ್ಲೂಕಿನ ಕಂಚಮಾರನಹಳ್ಳಿ ಗ್ರಾಮದಲ್ಲಿ ನಡೆದಿದೆ. ರಂಗಸ್ವಾಮಿ (27) ಕೊಲೆಯಾದ ಮಗ, ಕೃಷ್ಣೇಗೌಡ (52) ಮಗನನ್ನೇ ಕೊಂದ ಆರೋಪಿ.

ಯಾವುದೇ ಕೆಲಸಕ್ಕೆ ಹೋಗದೆ ಕುಡಿತದ ಚಟಕ್ಕೆ ದಾಸನಾಗಿದ್ದ ರಂಗಸ್ವಾಮಿ, ಪ್ರತಿನಿತ್ಯ ಮದ್ಯ ಸೇವನೆ ಮಾಡಲು ಹಣ ನೀಡುವಂತೆ ಪೋಷಕರನ್ನು ಪೀಡಿಸುತ್ತಿದ್ದ. ಕಂಠಪೂರ್ತಿ ಕುಡಿದು ಬಂದು, ತಂದೆ ಹಾಗು ಮನೆಯವರ ಜೊತೆ ಗಲಾಟೆ ನಡೆಸುತ್ತಿದ್ದ. ಮಗನ ಕಾಟದಿಂದ ಕುಟುಂಬಸ್ಥರು ರೋಸಿ ಹೋಗಿದ್ದರು. ಶುಕ್ರವಾರ ರಾತ್ರಿ ಕೂಡ ರಂಗಸ್ವಾಮಿ ಕುಡಿದು ಬಂದು ಜಗಳ ಮಾಡಿ ಮಲಗಿದ್ದ. ಈ ವೇಳೆ ಕೋಪಗೊಂಡ ತಂದೆ ಕೃಷ್ಣೇಗೌಡ ಅವರು, ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದಾರೆ. ಈ ಸಂಬಂಧ ಹಾಸನ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಸ್ವಾಮೀಜಿಗಳಿಂದ ಧರ್ಮ ಧ್ವಜಾರೋಹಣ | ಭಕ್ತರ ಸಮ್ಮುಖದಲ್ಲಿ ಅಡ್ಡಪಲ್ಲಕ್ಕಿ ಉತ್ಸವ

# ಕಬ್ಬಳಿ ಬಸವೇಶ್ವರಸ್ವಾಮಿ ಜಾತ್ರೆಗೆ ಚುಂಚಶ್ರೀ ಅದ್ದೂರಿ ಚಾಲನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಪುರಾಣ ಪ್ರಸಿದ್ಧ ಕಬ್ಬಳಿ ಗ್ರಾಮದಲ್ಲಿನ ಬಸವೇಶ್ವರಸ್ವಾಮಿ ಸನ್ನಿಧಿಯಲ್ಲಿ ಶನಿವಾರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ ಅವರು ಪ್ರಥಮ ಆರತಿ ಬೆಳಗುವ ಮೂಲಕ ಐದು ದಿನಗಳ ಕಾಲ ನಡೆಯುವ ರಾಸುಗಳ ಪೂಜೆ, ಜಾತ್ರಾ ಮಹೋತ್ಸವಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು.

ವಿವಿಧ ಪುಷ್ಪಗಳು, ಒಡವೆ-ವಸ್ತ್ರಗಳಿಂದ ಅಲಂಕರಿಸಲ್ಪಟ್ಟ ಬಸವೇಶ್ವರಸ್ವಾಮಿಯ ಉತ್ಸವ ಮೂರ್ತಿಗೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಶಂಭುನಾಥ ಸ್ವಾಮೀಜಿ, ಕಬ್ಬಳಿ ಮಠದ ಶಿವಪುತ್ರನಾಥ ಸ್ವಾಮೀಜಿ ಅವರು ಪೂಜೆ ಸಲ್ಲಿಸಿದ ನಂತರ ಅಡ್ಡಪಲ್ಲಕ್ಕಿ ಉತ್ಸವ ಆರಂಭವಾಯಿತು. ಗ್ರಾಮದ ಕಲ್ಲೇಶ್ವರ, ಲಕ್ಷ್ಮೀದೇವಿ, ಈಶ್ವರ ದೇವರು ಸೇರಿ ಎಲ್ಲಾ ದೇವಾಲಯಗಳಿಗೆ ಪೂಜೆ ಸಲ್ಲಿಸಲಾಯಿತು. ಮಂಗಳವಾದ್ಯದೊಡನೆ ದೇವರನ್ನು ಮೂಲಸ್ಥಾನಕ್ಕೆ ಕರೆತರಲಾಯಿತು.

ಚುಂಚಶ್ರೀಗಳನ್ನು ಗ್ರಾಮಸ್ಥರು ಹಾಗು ಭಕ್ತರು



ಪಾದಪೂಜೆ ಮಾಡಿ ಮಂಗಳ ವಾದ್ಯ ದೊಂದಿಗೆ ಸ್ವಾಗತಿಸಿದರು. ವಿಘ್ನೇಶ್ವರ ಹಾಗು ಗೋಪೂಜೆ ನಂತರ ಮೂಲಸ್ಥಾನದಲ್ಲಿರುವ ಶ್ರೀ ಬಸವೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಹಿಂಭಾಗದಲ್ಲಿರುವ ನಂದಿ ವಿಗ್ರಹಕ್ಕೆ ಕ್ಷೀರಾಭಿಷೇಕ ನೆರವೇರಿಸಲಾಯಿತು. ದೇಗುಲದ ಆವರಣದಲ್ಲಿರುವ ಪುಷ್ಕರಣಿಯಲ್ಲಿ ಗಂಗಾ ಪೂಜೆ ನೆರ ವೇರಿಸಿದ ಸ್ವಾಮೀಜಿ, ಗರುಡಗಂಬದ ಮೇಲಿರುವ ದೀಪವನ್ನು ಬೆಳಗಿಸಿ ಧರ್ಮ ಧ್ವಜಾ ರೋಹಣ ಕಾರ್ಯ ನೆರವೇರಿಸಿದರು.

> ಸೋಮವಾರ ಸಂಜೆ ಬಸವೇಶ್ವರಸ್ವಾಮಿಯ ಸರ್ಪೋತ್ಸವ, ದಸರಿಘಟ್ಟದ ಚೌಡೇಶ್ವರಿ ದೇವಿ, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯ ಪುತ್ಥಳಿಕೆ, ಡಾ.ನಿರ್ಮಲಾನಂದನಾಥ ಸ್ವಾಮೀಜಿಯ ಮುತ್ತಿನ ಪಲ್ಲಕ್ಕಿ ಮೆರವಣಿಗೆ, ಪುಷ್ಕರಿಣಿಯಲ್ಲಿ ತೆಪ್ಪೋತ್ಸವ ಹಾಗು ಧಾರ್ಮಿಕ ಸಭೆ ಜರುಗಲಿವೆ.
>
> – ಶ್ರೀ ಶಂಭುನಾಥ ಸ್ವಾಮೀಜಿ, ಹಾಸನ ಶಾಖಾ ಮಠ

ಭಕ್ತರಿಗೆ ಪ್ರಸಾದ ನೀಡಿದರು.

**ಇಂದಿನ ಕಾರ್ಯಕ್ರಮ**

ಜಾತ್ರಾ ಪ್ರಯುಕ್ತ ಭಾನುವಾರ ಬೆಳಿಗ್ಗೆ ಬಸವೇಶ್ವರ ಸ್ವಾಮಿಗೆ ವಿಶೇಷ ಪೂಜೆ ನಡೆಯಲಿದ್ದು, ಸಂಜೆ 6 ಗಂಟೆಗೆ ಮಿಮಿಕ್ರಿ ಗೋಪಿಯವರಿಂದ ಹಾಸ್ಯಸಂಜೆ ಆಯೋಜಿ ಸಲಾಗಿದೆ. ಕಾರ್ತಿಕ ಸೋಮವಾರ ಬೆಳಿಗ್ಗೆ ದೇವರಿಗೆ ಪಂಚಾಮೃತಾಭಿಷೇಕ ಹಾಗು ಹೋಮ ಗಳು ಸೇರಿ ಹಲವು ಪೂಜೆಗಳು ಜರುಗಲಿವೆ. ಸ್ವಾಮೀಜಿಗಳ ಸಾನಿಧ್ಯದಲ್ಲಿ ದಾನಿಗಳಾದ ಪ್ರದೀಪಾ ವೆಂಕಟೇಶ್ ಪ್ರಸಾದ್ ದಂಪತಿ ಅವರ ಸಹಕಾರದೊಂದಿಗೆ ದೇವಸ್ಥಾನದ ಆವರಣದಲ್ಲಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದೆ.

ಮಂಗಳವಾರ ವಿವಿಧ ಗ್ರಾಮಸ್ಥರಿಂದ ಪೂಜೆ, ಉತ್ಸವ ಹಾಗೂ ಸಂಜೆ ಶಿವಾರ ಉಮೇಶ್ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನ.13ರ ಬುಧವಾರ ಸಂಜೆ ಗೋಧೂಳಿ ಲಗ್ನದಲ್ಲಿ ಧರ್ಮಧ್ವಜ ಅವರೋಹಣ ನೆರವೇರಿಸಿ, ಉತ್ಸವ ಮೂರ್ತಿಯನ್ನು ಮೆರವಣಿ ಗೆಯೊಂದಿಗೆ ಗ್ರಾಮಕ್ಕೆ ಕರೆದುಕೊಂಡು ಹೋಗುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಮುಕ್ತಾಯ ಘೋಷಿಸಲಾಗುವುದು ಎಂದು ಶ್ರೀ ಶಂಭುನಾಥ ಸ್ವಾಮೀಜಿ ಅವರು ತಿಳಿಸಿದರು. ಕಬ್ಬಳಿ ಸೇರಿ ಸುತ್ತಮುತ್ತಲ ಗ್ರಾಮಗಳಿಂದ ಭಕ್ತರು ಪಾಲ್ಗೊಂಡಿದ್ದರು.

## ಜಿಎಸ್‌ಟಿ ವರದಿ ಬಿಡುಗಡೆ: ರಾಜ್ಯ ನಂ.1

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯವಾರು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) 2025ರ ಅಕ್ಟೋಬರ್ ತಿಂಗಳ ಆದಾಯ ವರದಿ ಬಿಡುಗಡೆಯಾಗಿದ್ದು, ಪ್ರಮುಖ ಆರ್ಥಿಕ ರಾಜ್ಯಗಳ ಬೆಳವಣಿಗೆ ದರದಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿ ಇದೆ.

2024ರ ಅಕ್ಟೋಬರ್‌ಗೆ ಹೋಲಿಸಿದರೆ 2025ರ ಅಕ್ಟೋಬರ್ ದೇಶಿಯ ಜಿಎಸ್‌ಟಿ 1,45,052 ಕೋಟಿ ರೂ. ಸಂಗ್ರಹವಾಗಿದೆ, ಅಂದರೆ ಶೇ.2ರಷ್ಟು ಬೆಳವಣಿಗೆ ಹೊಂದಿದೆ. ಹಣಕಾಸು ಸಚಿವಾಲಯ ಶನಿವಾರ ರಾಜ್ಯಗಳ ಜಿಎಸ್‌ಟಿ ಆದಾಯದ ಸಂಗ್ರಹ ಮತ್ತು ಬೆಳವಣಿಗೆ ದರ ಮಾಹಿತಿ ಬಿಡುಗಡೆ ಮಾಡಿದೆ. ಆ ಪೈಕಿ ಅಕ್ಟೋಬರ್ ತಿಂಗಳ ಜಿಎಸ್‌ಟಿ ಆದಾಯ 1.95 ಲಕ್ಷ ಕೋಟಿ ರೂ ಸಂಗ್ರಹವಾಗಿದೆ. ತೆರಿಗೆ ಕಡಿತದ ಹೊರತಾಗಿಯೂ ಶೇ.4.6 ರಷ್ಟು ಏರಿಕೆ ಕಂಡಿದೆ. ಹಣಕಾಸು ಸಚಿವಾಲಯದ ಮಾಹಿತಿಯ ಪ್ರಕಾರ, ಕೇಂದ್ರ ಜಿಎಸ್‌ಟಿ (ಸಿಜಿಎಸ್‌ಟಿ) 36,547 ಕೋಟಿ ರೂ., ರಾಜ್ಯ ಜಿಎಸ್‌ಟಿ (ಎಸ್‌ಜಿಎಸ್‌ಟಿ) 45,134 ಕೋಟಿ ರೂ. ಮತ್ತು ಇಂಟಿಗ್ರೇಟೆಡ್ ಜಿಎಸ್‌ಟಿ (ಐಜಿಎಸ್‌ಟಿ) 1,06,443 ಕೋಟಿ ರೂ ಸೇರಿ ಹೆಚ್ಚುವರಿಯಾಗಿ ಸರ್ಕಾರವು ಸೆಸ್‌ನಿಂದ 7,812 ಕೋಟಿ ರೂ. ಸಂಗ್ರಹಿಸಿದೆ.

ಕರ್ನಾಟಕ ಜಿಎಸ್‌ಟಿ ಸಂಗ್ರಹ 14,395 ಕೋಟಿ ರೂ, ಬೆಳವಣಿಗೆ ದರ ಶೇ.10ರಷ್ಟಿದೆ. ಗುಜರಾತ್ ಜಿಎಸ್‌ಟಿ ಸಂಗ್ರಹ 12,113 ಕೋಟಿ ರೂ, ಬೆಳವಣಿಗೆ ದರ ಶೇ.6 ರಷ್ಟಿದೆ. ಮಹಾ ರಾಷ್ಟ್ರ ಜಿಎಸ್‌ಟಿ ಸಂಗ್ರಹ 32,025 ಕೋಟಿ ರೂ, ಬೆಳವಣಿಗೆ ದರ ಶೇ.3ರಷ್ಟಿದೆ. ಹಿಮಾಚಲ ಪ್ರದೇಶದಲ್ಲಿ ಶೇ.17, ಜಾರ್ಖಂಡ್‌ನಲ್ಲಿ ಶೇ.15,ಉತ್ತರಾಖಂಡ್ ಶೇ.13ರಷ್ಟು ಕುಸಿತಕಂಡಿದೆ.

## ಅಪಘಾತ: ಬೈಕ್ ಸವಾರ ಸಾವು, ಇಬ್ಬರಿಗೆ ಗಾಯ

**ಅರಕಲಗೂಡು:** ಬುಲೆರೋ ವಾಹನ ಹಾಗು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಒಬ್ಬ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟು, ಇನ್ನಿಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ವಡ್ಡರಹಳ್ಳಿ ಗೇಟ್ ಬಳಿ ಶುಕ್ರವಾರ ರಾತ್ರಿ ನಡೆದಿದೆ.

ತಾಲ್ಲೂಕಿನ ರಾಮನಾಥಪುರ ಹೋಬಳಿ ಕೂಡ್ಲೂರು ಗ್ರಾಮದ ಸೀನು (40) ಸಾವನ್ನಪ್ಪಿದ ವ್ಯಕ್ತಿ. ವಡವನ ಹೊಸಳ್ಳಿ ಗ್ರಾಮದ ಮಹೇಶ್, ಶೇಖರ್ ಗಾಯಾಳುಗಳು. ಈ ಮೂವರು ಬೈಕ್‌ನಲ್ಲಿ ಸೋಂಪುರ ಗ್ರಾಮದಲ್ಲಿ ಸಂಬಂಧಿಕರ ತಿಥಿ ಕಾರ್ಯಕ್ಕೆ ಹೋಗಿ ವಾಪಾಸ್ ತಮ್ಮ ಗ್ರಾಮಕ್ಕೆ ಬರುವಾಗ ಶುಕ್ರವಾರ ರಾತ್ರಿ ವಡ್ಡರಹಳ್ಳಿ ಗೇಟ್ ಬಳಿ, ಬುಲೆರೋ ವಾಹನ ಮತ್ತು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಸ್ಥಳದಲ್ಲೇ ಕೂಡ್ಲೂರು ಸೀನ ಸಾವನಪ್ಪಿದ್ದಾರೆ. ಶೇಖರ್, ಮಹೇಶ್ ತೀವ್ರ ಗಾಯಗೊಂಡಿದ್ದಾರೆ. ಇಬ್ಬರು ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಸರ್ಕಾರಿ ಆಸ್ಪತ್ರೆಗೆ ದಾಖಲಿಸ ಲಾಗಿದೆ.

## ಚಿನ್ನಾಭರಣ ಕಳವು

**ಹಾಸನ:** ಹಾಡಹಗಲೇ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 3.70 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಶ್ರೀರಾಮ ನಗರದ ಅಲ್ಲಾನ ಕಾಫಿ ಕ್ಯೂರಿಂಗ್ ಸಮೀಪ ನಡೆದಿದೆ.

ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕು ಪಾಳ್ಯ ಹೋಬಳಿ ದೊಡ್ಡಿದೀಣಿ ಗ್ರಾಮದ ದ್ರಾಕ್ಷಾಯಿಣಿ ಹಾಗು ಕುಮಾರ್ ಎಂಬುವವರು ವಾಸವಿದ್ದ ಬಾಡಿಗೆ ಮನೆಯಲ್ಲಿ ಕಳ್ಳತನ ವಾಗಿದೆ. ದಂಪತಿಗಳಿಬ್ಬರೂ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಮಕ್ಕಳು ಮೊಸಳೆಹೊಸಹಳ್ಳಿ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಾರೆ.

ಅ.30 ರಂದು ಸಂಜೆ ಶಾಲೆ ಮುಗಿಸಿ ಮಕ್ಕಳು ಬಂದು ನೋಡಿದಾಗ ಬಾಗಿಲು ಮುರಿದಿ ರುವುದು ತಿಳಿದಿದೆ. ಬಲವಾದ ಆಯುಧದಿಂದ ಬಾಗಿಲ ಬೀಗ ಮುರಿದಿರುವ ಕಳ್ಳರು ಬೀರುವಿ ನಲ್ಲಿಟ್ಟಿದ್ದ 10 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ ಜುಮುಕಿ, 15 ಗ್ರಾಂ ತೂಕದ ಚಿನ್ನದ ಕೊರಳ ಚೈನ್, 10 ಗ್ರಾಂ ತೂಕದ 3 ಚಿನ್ನದ ಉಂಗುರ, 20 ಸಾವಿರ ರೂ. ನಗದು ಕದ್ದಿದ್ದಾರೆ.

# ಹಿಂದೂ ಸಮಾಜ ಒಗ್ಗಟ್ಟಾಗಲಿ, ದ್ವೇಷ ರಾಜಕೀಯ ಬೇಡ

## ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್

• ಪ್ರಜೋದಯ ವರದಿ

**ಸಕಲೇಶಪುರ:** ಹಿಂದೂ ಸಮಾಜವನ್ನು ವಿಭಜಿಸಲು ಕೆಲವು ಪ್ರಯತ್ನಗಳು ನಡೆಯುತ್ತಿವೆ. ಹಿಂದೂ ಸಮಾಜ ಒಗ್ಗಟ್ಟಾಗಿರಬೇಕೆಂದು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಅವರು ಹೇಳಿದರು.

ಖಾಸಗಿ ಕಾರ್ಯನಿಮಿತ್ತ ಶಾಸಕ ಸಿಮೆಂಟ್ ಮಂಜು ಅವರ ನಿವಾಸಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಿಂಗಾಯಿತ- ವೀರಶೈವ, ಜೈನ ಮುಂತಾದ ಸಮುದಾಯಗಳು ಬೇರೆ ಬೇರೆ ಎನ್ನುವ ನಿಲುವು ದುಃಖಕರವಾಗಿದೆ. ಮುಸ್ಲಿಂ ಸಮುದಾಯದಲ್ಲಿ 111 ಜಾತಿಗಳು ಇದ್ದರೂ ಅವರು ವಿಭಜಿತರಾಗಿಲ್ಲ ಎಂದರು.

ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ



ಬಹುಸಂಖ್ಯಾತ ಹಿಂದೂಗಳ ವಿರುದ್ಧ ಕ್ರಮ ಕೈಗೊಳ್ಳುವುದು ಸರಿಯಲ್ಲ. ಇಂದಿನ ಮುಸ್ಲಿಮರೂ ಹಿಂದೂ ಮೂಲದವರೇ, ಅವರ ಡಿಎನ್‌ಎ ನಮ್ಮದ್ದೇ ಆಗಿದೆ. ದೇಶದ ಪ್ರತಿಯೊಬ್ಬರೂ ರಾಷ್ಟ್ರನಿಷ್ಠೆ ತೋರಿಸಬೇಕೆಂದು ತಿಳಿಸಿದರು.

ಕಲ್ಲಡ್ಕದಲ್ಲಿ ಶ್ರೀರಾಮ ವಿದ್ಯಾಸಂಸ್ಥೆ ಮೂಲಕ ಹಿಂದುತ್ವನಿಷ್ಠ ಮತ್ತು ರಾಷ್ಟ್ರೀಯ ಚಿಂತನೆ ಹೊಂದಿರುವ ಮಕ್ಕಳನ್ನು ಬೆಳೆಸುವ ಪ್ರಯತ್ನ ನಡೆಯುತ್ತಿದೆ. ಇದೇ ಮಾದರಿಯಲ್ಲಿ ಸಕಲೇಶ ಪುರದಲ್ಲೂ ಹೊಸ ಶಾಲೆ ಆರಂಭಿಸಲು ಉದ್ದೇಶಿಸಲಾಗಿದೆ. ರಾಷ್ಟ್ರನಿಷ್ಠ ಶಿಕ್ಷಣ ನೀಡುವ ನಿಟ್ಟಿನಲ್ಲಿ ಇದು ಹೊಸ ಹೆಜ್ಜೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಅವರ ಕಾನೂನು ಎಲ್ಲರಿಗೂ ಒಂದೇ ಎಂಬ ಹೇಳಿಕೆಗೆ ಪ್ರತಿಕ್ರಿ ಯಿಸಿದ ಭಟ್, ನಾವು ಕಾನೂನು ಪ್ರಕಾರವೇ ಪಥ ಸಂಚಲನ ಮಾಡುತ್ತೇವೆ. ಅದು ನಮ್ಮ ಸಂವಿಧಾನಾತ್ಮಕ ಹಕ್ಕು. ಲಕ್ಷಾಂತರ ಪಥಸಂಚಲನಗಳನ್ನು ನಡೆಸಿದ್ದೇವೆ ಅದರಲ್ಲಿ » ನಾಲ್ಕನೇ ಪುಟದಲ್ಲಿ

## ಹೇಮಾವತಿ ಜಲಾಶಯಕ್ಕೆ ಉಸ್ತುವಾರಿ ಸಚಿವರಿಂದ ಬಾಗಿನ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಶನಿವಾರ ಗೊರೂರಿನ ಹೇಮಾವತಿ ಜಲಾಶಯಕ್ಕೆ ಬಾಗಿನ ಸಮರ್ಪಿಸಿದರು.

ಬಾಗಿನ ಅರ್ಪಣೆ ಅಂಗವಾಗಿ ಹೇಮಾವತಿ ಜಲಾಶಯ ಗೇಟ್‌ಗಳನ್ನು ಹೂವು, ತಳಿರು ತೋರಣ ಗಳಿಂದ ಅಲಂಕರಿಸಲಾಗಿತ್ತು. ಮಧ್ಯಾಹ್ನ 1 ಗಂಟೆಗೆ ಆಗಮಿಸಿದ ಸಚಿವ ಕೃಷ್ಣ ಬೈರೇಗೌಡ ಹಾಗು ಶಾಸಕರನ್ನು ವಾದ್ಯ ಗೋಷ್ಠಿ ಮೂಲಕ ಸ್ವಾಗತಿಸಲಾಯಿತು. ವಿಶೇಷ ಪೂಜೆ ಸಲ್ಲಿಸಿದ ಗಣ್ಯರು ಸಂಪ್ರದಾಯದಂತೆ ಬಾಗಿನ ಅರ್ಪಿಸಿದರು. ನಂತರ 6 ಕ್ರಸ್ಟ್ ಗೇಟ್ ಮೂಲಕ ನೀರು ಬಿಡಲಾಯಿತು. ಹಾಲ್ನೊರೆ ಯಂತೆ ಉಕ್ಕಿ ಹರಿದ ಜಲಧಾರೆಯನ್ನು ಜನಪ್ರತಿನಿಧಿಗಳು ಹಾಗು ಅಧಿಕಾರಿ ಗಳು ಕಣ್ತುಂಬಿಕೊಂಡರು. ಬಾಗಿನ ಸಮ



ರ್ಪಣೆ ಸುದ್ದಿ ತಿಳಿದ ಗ್ರಾಮಸ್ಥರು ಬಂದಿದ್ದರು. ಸುಮಾರು ಅರ್ಧ ಗಂಟೆ ನೀರು ಹರಿಸಿ ಬಳಿಕ ಸ್ಥಗಿತ ಗೊಳಿ ಸಲಾಯಿತು.

ಈ ವೇಳೆ ಹಾಸನಾಂಬ ಹಾಗು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಯಶಸ್ಸಿಗೆ ಸಹಕರಿಸಿದ ವಿವಿಧ ಇಲಾಖೆ ನೌಕರರು, ಸ್ಕೌಟ್ಸ್ ಅಂಡ್ ಗೈಡ್ಸ್ ಶಿಬಿರಾರ್ಥಿಗಳು, ಪೌರ ಕಾರ್ಮಿಕರು, ಮಾಧ್ಯಮದವರಿಗೆ ಜಿಲ್ಲಾಡಳಿತದಿಂದ ಔತಣ ಕೂಟ ಏರ್ಪಡಿಸಲಾಗಿತ್ತು.

ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಕೆ.ಎಂ.ಶಿವಲಿಂಗೇಗೌಡ,ಸಿ.ಎನ್. ಬಾಲಕೃಷ್ಣ, ಸಿಮೆಂಟ್ ಮಂಜು, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಕಾಂಗ್ರೆಸ್ ಮುಖಂಡರು ಹಾಜರಿದ್ದರು.

## ಪುರಸಭೆ ಪ್ರತಿನಿಧಿಗಳಿಗೆ ಅವಮಾನ: ಕಾರ್ಯಕ್ರಮ ಬಹಿಷ್ಕಾರ



• ಪ್ರಜೋದಯ ವರದಿ

**ಸಕಲೇಶಪುರ:** ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪುರಸಭೆ ಚುನಾಯಿತ ಪ್ರತಿನಿಧಿಗಳಿಗೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಪುರಸಭೆ ಅಧ್ಯಕ್ಷೆ ಜ್ಯೋತಿರಾಜ್‌ಕುಮಾರ್, ಉಪಾಧ್ಯಕ್ಷರು ಹಾಗು ಸದಸ್ಯರು ವೇದಿಕೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿ ಕಾರ್ಯಕ್ರಮ ಬಹಿಷ್ಕರಿಸಿ ಹೊರ ನಡೆದರು.

ಅಧ್ಯಕ್ಷೆ ಜ್ಯೋತಿ ರಾಜ್‌ಕುಮಾರ್ ಅವರು ಮಾತನಾಡಿ, ಕಾರ್ಯಕ್ರಮದ ಆಯೋಜನೆಗೆ ಅಗತ್ಯವಿರುವ ಎಲ್ಲಾ ಸಹಾಯವನ್ನು ಪುರಸಭೆ ಮಾಡಿದೆ. ಸುಭಾಷ್ ಮೈದಾನದ ಸ್ವಚ್ಛತೆ, ವೇದಿಕೆ ನಿರ್ಮಾಣ, ಧ್ವಜಸ್ತಂಭ ಸ್ಥಾಪನೆ ಎಲ್ಲವನ್ನೂ ಪುರಸಭೆ ವತಿಯಿಂದ ಮಾಡಲಾಗಿದೆ. ಆದರೂ ಕಳೆದ ಕೆಲವು ವರ್ಷಗಳಿಂದ ಪುರಸಭಾ ಸದಸ್ಯರನ್ನು, ಅಧ್ಯಕ್ಷೆ-ಉಪಾಧ್ಯಕ್ಷರನ್ನು ಕಾರ್ಯಕ್ರಮಗಳಲ್ಲಿ ಕಡೆಗಣಿಸಲಾಗುತ್ತಿದೆಯೆಂದು ಆಕ್ರೋಶ ವ್ಯಕ್ತಪಡಿಸಿದರು.

ಇಂದಿನ ಕಾರ್ಯಕ್ರಮದಲ್ಲಿಯೂ ಸಹ ಸೌಜನ್ಯಕ್ಕಾದರೂ ವೇದಿಕೆಯಲ್ಲಿದ್ದ ಪುರಸಭಾ ಸದಸ್ಯರನ್ನು ಸ್ವಾಗತಿಸಿಲ್ಲ. ಈ ರೀತಿಯ ವರ್ತನೆ ಮುಂದುವರಿದರೆ ಮುಂದಿನ ದಿನಗಳಲ್ಲಿ ನಡೆ ಯುವ ಯಾವ ಕಾರ್ಯಕ್ರಮಕ್ಕೂ ಪುರಸಭಾ ಸದಸ್ಯರು ಸಹಕರಿಸುವುದಿಲ್ಲವೆಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ, ಉಪವಿಭಾಗಾಧಿಕಾರಿ ಹಾಗು ತಹಶೀಲ್ದಾರ್‌ರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಲಾಯಿತು. ಕಾರ್ಯಕ್ರಮದ ಮಧ್ಯದಲ್ಲೇ ಪುರಸಭೆ ಪ್ರತಿನಿಧಿಗಳು ಹೊರ ನಡೆದರು.

## 14.50 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ನಾಶ: 2,798 ಕೋಟಿ ರೂ. ಸರ್ಕಾರದ ನೆರವು

# 10 ದಿನದಲ್ಲಿ ರೈತರ ಖಾತೆಗೆ ಮಳೆಹಾನಿ ಪರಿಹಾರ

• ಪ್ರಜೋದಯ ವರದಿ

**ಹಾಸನ:** ಮುಂಗಾರು ಹಂಗಾಮಿನ ಬೆಳೆಹಾನಿ ಸಮೀಕ್ಷೆ ಪೂರ್ಣಗೊಂಡಿದೆ. ರಾಜ್ಯದಲ್ಲಿ 18.50 ಲಕ್ಷ ರೈತರ ಬೆಳೆ ಹಾನಿಯಾಗಿದೆ, 14.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲೂ ಬೆಳೆ ನಾಶವಾಗಿದ್ದು, ಪರಿಹಾರವಾಗಿ 2,798 ಕೋಟಿ ರೂ. ಪರಿಹಾರ ನೀಡಿಕೆ ಕಾರ್ಯ ಈಗಾಗಲೇ ಶುರುವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಡಿಆರ್‌ಎಫ್ ಪ್ರಕಾರ ಪರಿಹಾರ ಮೊತ್ತ 1,550 ಕೋಟಿ ಆಗಲಿದೆ. ಆದರೆ, ಸರ್ಕಾರ 1,248 ಕೋಟಿ ಸೇರಿಸಿ ಅನ್ನದಾತರಿಗೆ ನೆರವು ನೀಡುತ್ತಿದೆ. ಈಗಾಗಲೇ 200 ಕೋಟಿಯಷ್ಟು ಖಾತೆಗೆ ಜಮೆಯಾಗಿದೆ. ಮುಂದಿನ 10 ದಿನಗಳಲ್ಲಿ ರೈತರ ಖಾತೆಗೆ ಪರಿಹಾರ ಹಣ ಸೇರಲಿದೆ ಎಂದು ತಿಳಿಸಿದರು.

ರಸ್ತೆ, ಸೇತುವೆ, ಶಾಲೆ-ಅಂಗನವಾಡಿ ಕಟ್ಟಡ ಸೇರಿ ಮೂಲ ಸೌಕರ್ಯ ಮರು ನಿರ್ಮಾಣಕ್ಕೆ ಎನ್‌ಡಿಆರ್‌ಎಫ್ ನಿಯಮಾವಳಿ ಪ್ರಕಾರ 3,450 ಕೋಟಿ ನೆರವು ಬೇಕಿದೆ. ಅದಕ್ಕಾಗಿ



1,545 ಕೋಟಿ ರೂ. ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲು ಸಚಿವ ಸಂಪುಟ ಸಭೆಯ ಅನುಮೋದನೆ ಪಡೆಯಲಾಗಿದೆ. ಅದಕ್ಕೆ ಹಣ ಕೊಡುವುದು ಕೇಂದ್ರದ ಆದ್ಯ ಕರ್ತವ್ಯ. ಹಿಂದೆ ಬರ ಪರಿಹಾರ ಕೊಡದೇ ಇದ್ದಾಗ ಸುಪ್ರೀಂ ಕೋರ್ಟ್ ಮೊರೆಹೋಗಬೇಕಾಯಿತು. ಈ ಬಾರಿ ಹಾಗಾಗಲ್ಲ, ನೆರವು ಸಿಗುವ ವಿಶ್ವಾಸವಿದೆ. ಕೇಂದ್ರಕ್ಕೆ ತೆರಿಗೆ ಪಾವತಿಯಲ್ಲಿ ಕರ್ನಾಟಕ ಮೊದಲಿದೆ. ಅದಕ್ಕಾಗಿ ಕೇಂದ್ರ ಸ್ಪಂದಿಸಬೇಕೆಂದು ವಿನಂತಿಸಿದರು.

**ಕಂದಾಯ ಇಲಾಖೆಯಲ್ಲಿ ಸುಧಾರಣೆ**

ನಾನು ಕಂದಾಯ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಸಮಸ್ಯೆಗಳ ಆಗರವಾಗಿರುವ ಇಲಾಖೆಯಲ್ಲಿ ಸಂಪೂರ್ಣವಾಗಿ ಅಲ್ಲದೇ ಇದ್ದರೂ ತಕ್ಕಮಟ್ಟಿಗೆ ಸುಧಾರಣೆ ತರಲಾಗಿದೆ. » ನಾಲ್ಕನೇ ಪುಟದಲ್ಲಿ

### ಊರಿಗೊಂದು ವಿಶ್ವವಿಶ್ವಾಲಯ ಬೇಕಿತ್ತಾ..?


ರಾಜ್ಯದ ಹಲವು ವಿಶ್ವವಿಶ್ವಾಲಯಗಳಲ್ಲಿ ಮೂಲ ಭೂತ ಸೌಲಭ್ಯ, ಉಪನ್ಯಾಸಕರ ಕೊರತೆ ಬಗ್ಗೆ ಪ್ರತಿಕ್ರಿಯಿಸಿ, ಯುಜಿಸಿ ನಿಯಮಾವಳಿ ಪ್ರಕಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವಂತೆ ಹೈಕೋರ್ಟ್ ನಿರ್ದೇಶನ ನೀಡಿದೆ. ಅದನ್ನು ಸಡಿಲಿಕೆ ಮಾಡಲು ಮತ್ತೊಮ್ಮೆ ಅಪೀಲ್ ಹಾಕಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. 4 ವಿಶ್ವವಿಶ್ವಾಲಯ ಬದಲಿಗೆ 40 ವಿವಿ ಮಾಡಿದರೆ ಹೇಗೆ, ನಾವು 21ನೇ ಶತಮಾನದಲ್ಲಿದ್ದೇವೆ. ಸ್ಪರ್ಧಾತ್ಮಕ ಯುಗ, ಹೆಜ್ಜೆಗೂ ಸ್ಪರ್ಧೆ ಇರುವಾಗ ಊರಿಗೊಂದು ವಿಶ್ವವಿಶ್ವಾಲಯ ಬೇಕಿತ್ತಾ, ಹೀಗೆ ಮಾಡಿದರೆ ನಮಗೆ ಕಿರೀಟ ಬರಲಿದೆ, ಭೂಷಣ ಆಗಲಿದೆ ಎಂದು ಮಾಡಿದರೆ ಬೆಲೆ ಯಾರು ತೆರಬೇಕು ಎಂದು ಪ್ರಶ್ನಿಸಿದರು.

C M Y K

# ಹೇಮಂತದ ಧಾವಂತ: ಮುಗ್ಧ ಮನಸು, ಸ್ನಿಗ್ಧ ತಿನಿಸು

» **ಪ್ರಕೃತಿಮಾತೆಯ ಹೊಸ ರೂಪವನ್ನು ನೋಡಲು ನಾವೆಲ್ಲರೂ ಸಿದ್ಧರಾಗೋಣ. ಅರೆ, ಏನಪ್ಪಾ ಇದು ಎಂದು ಯೋಚಿಸುತ್ತಿದ್ದೀರಾ? ಪ್ರಕೃತಿಯಲ್ಲಿ ಶರತ್ ಋತುವು ಕಳೆದು ಈಗ ಹೇಮಂತ ಋತು ಪ್ರಾರಂಭವಾಗುವ ಕಾಲ. ಹೇಮಂತ ಋತು ಎಂದರೆ ಚಳಿಗಾಲದ ಆಗಮನ. ಈ ಸಮಯದಲ್ಲಿ ಹೊರಗಿನ ಶೀತಲತೆಯ ಪ್ರಭಾವದಿಂದ ನಮ್ಮ ದೇಹದಲ್ಲಿ ಅಗ್ನಿಯು ಉತ್ತೇಜನಗೊಳ್ಳುತ್ತದೆ.**





ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ಪ್ರಕೃತಿಮಾತೆಯ ಹೊಸ ರೂಪವನ್ನು ನೋಡಲು ನಾವೆಲ್ಲರೂ ಸಿದ್ಧರಾಗೋಣ. ಅರೆ, ಏನಪ್ಪಾ ಇದು ಎಂದು ಯೋಚಿಸುತ್ತಿದ್ದೀರಾ? ಪ್ರಕೃತಿಯಲ್ಲಿ ಶರತ್ ಋತುವು ಕಳೆದು ಈಗ ಹೇಮಂತ ಋತು ಪ್ರಾರಂಭವಾಗುವ ಕಾಲ. ಹೇಮಂತ ಋತು ಎಂದರೆ ಚಳಿಗಾಲದ ಆಗಮನ. ಈ ಸಮಯದಲ್ಲಿ ಹೊರಗಿನ ಶೀತಲತೆಯ ಪ್ರಭಾವದಿಂದ ನಮ್ಮ ದೇಹದಲ್ಲಿ ಅಗ್ನಿಯು ಉತ್ತೇಜನಗೊಳ್ಳುತ್ತದೆ. ಇದರ ಪ್ರಭಾವದಿಂದ ಹಸಿವು ಹೆಚ್ಚಾಗುತ್ತದೆ.

ಈ ಸಮಯದಲ್ಲಿ ನಮ್ಮ ಅಗ್ನಿಯು ಹೆಚ್ಚಿನ ಆಹಾರವನ್ನು ಬೇಡುತ್ತದೆ. ಅಂತೆಯೇ ಶೀತಕಾಲದಲ್ಲಿ ದೇಹದ ಬಲವು ಅತ್ಯುತ್ತಮವಾಗಿರುತ್ತದೆ. ಪ್ರತಿನಿತ್ಯವೂ ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು, ಮಲಮೂತ್ರಾದಿಗಳ ವಿಸರ್ಜನೆಯನ್ನು ಮುಗಿಸಿ, ದೇಹಕ್ಕೆ ಸೂಕ್ತವಾದಂಥ ಎಣ್ಣೆಯನ್ನು ಸವರಿ ಕೊಂಡು, ವ್ಯಾಯಾಮ ಮಾಡಿ, ಬಿಸಿನೀರಿನ ಸ್ನಾನವನ್ನು ಮಾಡಿದರೆ, ಅದು ದೇಹ-ಇಂದ್ರಿಯ-ಮನಸ್ಸುಗಳಿಗೆ ಉತ್ಸಾಹ, ಬಲ ಮತ್ತು ಲವಲವಿಕೆಯನ್ನು ನೀಡುತ್ತದೆ.

ಚಳಿಗಾಲದಲ್ಲಿ ನಮ್ಮ ದೇಹಬಲವು ಉತ್ತಮವಾಗಿರುವ ಕಾರಣ ಹೆಚ್ಚಿನ ವ್ಯಾಯಾಮವನ್ನು ಮಾಡಬಹುದು. ಉತ್ತಮವಾದ ವ್ಯಾಯಾಮ ಮತ್ತು ಅಭ್ಯಂಗ ಸ್ನಾನದ ಆಚರಣೆಯನ್ನು ನಾವು ಚಳಿಗಾಲದಲ್ಲಿ ಇಟ್ಟುಕೊಂಡರೆ, ಅದು ಪೂರ್ತಿ ವರ್ಷ ನಮ್ಮನ್ನು ಕಾಪಾಡುವುದರಲ್ಲಿ ಸಂಶಯವಿಲ್ಲ.

ಇನ್ನು ಈ ಕಾಲವು ಮಧುರರಸ ಪ್ರಧಾನವಾದ, ಜಿಡ್ಡಿನಂಶ ಇರುವ ಆಹಾರವನ್ನು ಸೇವಿಸಲು ಸೂಕ್ತ ಕಾಲ. ಇದು ನಮಗೆ ಉತ್ತಮವಾದ ಪುಷ್ಟಿಯನ್ನು ನೀಡಿ, ಶರೀರದ ಬೆಳವಣಿಗೆಗೆ ಸಹಾಯ ಮಾಡುತ್ತದೆ. ವಿಶೇಷವಾಗಿ ಬೆಳೆಯುವ ಮಕ್ಕಳಿಗೆ ಇಂಥ ಆಹಾರವನ್ನು ಶೀತ ಕಾಲದಲ್ಲಿ ನೀಡುವುದು ಬಹಳ ಪ್ರಯೋಜನಕಾರಿ.

ಹಾಗಾಗಿ, ಇಂದಿನ ಸಂಚಿಕೆಯಲ್ಲಿ ಈ ಚಳಿಗಾಲದಲ್ಲಿ ಮಕ್ಕಳಿಗೆ ನೀಡಬಹುದಾದ ಪುಷ್ಟಿಕರ ಆಹಾರವನ್ನು, ಆಯುರ್ವೇದದ ಚೌಕಟ್ಟಿನಲ್ಲಿ ಅದನ್ನು ತಯಾರಿಸುವ ವಿಧಾನವನ್ನು ತಿಳಿದು ಕೊಳ್ಳೋಣ. ಬಳಸುವ ಮುನ್ನ ನೆನಪಿನಲ್ಲಿಡಬೇಕಾದ ಅಂಶವೆಂದರೆ- ಇದನ್ನು ಮಕ್ಕಳ ಹಸಿವೆ ಮತ್ತು ಜೀರ್ಣ ಶಕ್ತಿಯನ್ನು ಗಮನಿಸಿ ಕೊಡುವುದು ಉತ್ತಮ.

ಹಸಿವೆಯಿದ್ದಾಗ ಪೌಷ್ಟಿಕ ಆಹಾರವನ್ನು ನೀಡಿದರೆ ಅದರಿಂದ ಪ್ರಯೋಜನಗಳು ಹಲವು. ಹಸಿವೆ ಕಡಿಮೆ ಇದ್ದಾಗ, ಜೀರ್ಣಶಕ್ತಿ ಕುಗ್ಗಿದಾಗ, ಜ್ವರ, ನೆಗಡಿ, ಕೆಮ್ಮುಗಳಿದ್ದಾಗ ಇದನ್ನು ನೀಡಬಾರದು.

ನೆಲ್ಲಿಕಾಯಿ ಜಾಮ್

ಬೇಕಾಗುವ ಪದಾರ್ಥಗಳು: 2 ಬಟ್ಟಲು ಬೆಟ್ಟದ ನೆಲ್ಲಿಕಾಯಿ ತುರಿ, 2 ಬಟ್ಟಲು ಸಕ್ಕರೆ ಅಥವಾ ಕಲ್ಲು ಸಕ್ಕರೆ ಪುಡಿ, 2 ಬಟ್ಟಲು ತುಪ್ಪ, ಏಲಕ್ಕಿ ಪುಡಿ ಕಾಲು ಚಮಚ ಮಾಡುವ ವಿಧಾನ: ಬೆಟ್ಟದ ನೆಲ್ಲಿಕಾಯಿಯನ್ನು ಚೆನ್ನಾಗಿ ನೀರಿನಲ್ಲಿ ತೊಳೆದು ನಯವಾಗಿ ತುರಿಯಬೇಕು.

ಒಂದು ದಪ್ಪ ತಳದ ಪಾತ್ರೆಗೆ ಎರಡು ಬಟ್ಟಲು ಸಕ್ಕರೆ ಮತ್ತು ಎರಡು ಬಟ್ಟಲು ನೀರನ್ನು ಹಾಕಿ ಅದನ್ನು ಕುದಿಯಲು ಇಡಬೇಕು. ಇದು ತಳ ಹಿಡಿಯದ ಹಾಗೆ ಮತ್ತೆ ಮತ್ತೆ ತಿರುಗಿಸುತ್ತಿರಬೇಕು. ಈ ಮಿಶ್ರಣವು ಒಂದು ಕುದಿ ಬಂದ ಮೇಲೆ ತುರಿದಿಟ್ಟುಕೊಂಡ ಎರಡು ಬಟ್ಟಲು ನೆಲ್ಲಿಕಾಯಿಯನ್ನು ಹಾಕಿ ಚೆನ್ನಾಗಿ ಬೇಯಿಸಬೇಕು. ಅದರ ನೀರಿನ ಅಂಶವೆಲ್ಲವೂ ಹೋಗುವವರೆಗೆ ಚೆನ್ನಾಗಿ ಬೇಯಿಸ ತಕ್ಕದ್ದು. ಸತತವಾಗಿ ತಿರುಗಿಸುತ್ತಿರಬೇಕು.

ನೀರು ಪೂರ್ತಿ ಕಡಿಮೆಯಾದ ಮೇಲೆ ಅದಕ್ಕೆ ತುಪ್ಪವನ್ನು ಹಾಕಿ ಸ್ವಲ್ಪ ತಿರುಗಿಸಿ. ಯಾವ ಕಾರಣಕ್ಕೂ ತಳ ಹಿಡಿಯದಂತೆ ಎಚ್ಚರ ವಹಿಸತಕ್ಕದ್ದು. ಮಿಶ್ರಣವು ತಳಬಿಟ್ಟ ನಂತರ ಪಾತ್ರೆಯನ್ನು ಒಲೆಯಿಂದ ಕೆಳಗಿಳಿಸಿ, ಅದಕ್ಕೆ ಏಲಕ್ಕಿ ಪುಡಿಯನ್ನು ಹಾಕಿ ತಿರುಗಿಸಿ ತಣ್ಣಗಾಗಲು ಬಿಡಬೇಕು.

ನೆಲ್ಲಿಕಾಯಿಯಿಂದ ತಯಾರಿಸಿದ ಸವಿಯಾದ ಜಾಮ್ ಈಗ ಸಿದ್ಧ. ಇದನ್ನು ಒಂದು ಸ್ವಚ್ಛವಾದ ಗಾಜಿನ ಶೀಶೆಯಲ್ಲಿ ಶೇಖರಿಸಿದರೆ ಬಹಳ ದಿನಗಳವರೆಗೂ ಬಳಸಬಹುದು. ಇದನ್ನು ದೋಸೆ, ಚಪಾತಿ, ರೊಟ್ಟಿಯ ಜತೆಗೆ ತಿನ್ನಲು ಬಹಳ ರುಚಿ. ಮಕ್ಕಳಿಗಂತೂ ಇದು ಅತ್ಯಂತ ಪ್ರಿಯ. ಇದರ ಪ್ರಮುಖ ಉಪಯೋಗಗಳು: ಇದೊಂದು ಉತ್ತಮ ರಸಾಯನ.

ಆಯಸ್ಸನ್ನು ವೃದ್ಧಿ ಮಾಡಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮಲಬದ್ಧತೆಯನ್ನು ನಿವಾರಿಸುತ್ತದೆ. ಹಸಿವೆ ಮತ್ತು ಜೀರ್ಣಶಕ್ತಿಯನ್ನು ವೃದ್ಧಿ ಮಾಡಿ ಪಿತ್ತವನ್ನು ಶಮನ ಮಾಡುತ್ತದೆ. ವಿಶೇಷವಾಗಿ ಮಕ್ಕಳಿಗೆ ಪುಷ್ಟಿಯನ್ನು ಕೊಡುತ್ತದೆ. ಕೂದಲು ಉದುರುವುದನ್ನು ತಡೆದು ಸೊಂಪಾಗಿ ಬೆಳೆಯಲು ಸಹಾಯಕ. ಹೃದಯದ ಆರೋಗ್ಯಕ್ಕೆ ಹಿತಕರ. ಸುಸ್ತು, ಆಯಾಸವನ್ನು ಕಡಿಮೆ ಮಾಡಿ ಲವಲವಿಕೆಯನ್ನು ನೀಡುತ್ತದೆ.


ಬ್ರಾಹ್ಮೀ ಲೇಹ್ಯ

ಬೇಕಾಗುವ ಪದಾರ್ಥಗಳು: ಒಂದೆಲಗದ ಸೊಪ್ಪು 2 ಬಟ್ಟಲು, ಬೆಲ್ಲ 2 ಬಟ್ಟಲು, ಜೀರಿಗೆ ಪುಡಿ 1 ಚಮಚ, ಧನಿಯ ಪುಡಿ 1 ಚಮಚ, ಒಣದ್ರಾಕ್ಷಿ 1/4 ಬಟ್ಟಲು, ಉತ್ತುತ್ತೆ 1/4 ಬಟ್ಟಲು, ಬಾದಾಮಿ 5ರಿಂದ 6, ಏಲಕ್ಕಿ ಪುಡಿ 1/2 ಚಮಚ, ಗಸಗಸೆ 1 ಚಮಚ, ತುಪ್ಪ 1/2 ಬಟ್ಟಲು.

ಮಾಡುವ ವಿಧಾನ: ಬೆಲ್ಲಕ್ಕೆ ಸ್ವಲ್ಪ ನೀರು ಹಾಕಿ ಕರಗಿಸಿ, ಶೋಧಿಸಿಕೊಳ್ಳಬೇಕು. ಗಸಗಸೆಯನ್ನು ಸ್ವಲ್ಪ ಲಘುವಾಗಿ ಹುರಿದುಕೊಂಡು ಅದಕ್ಕೆ ಒಣದ್ರಾಕ್ಷಿ, ಉತ್ತುತ್ತೆ, ಬಾದಾಮಿ, ಪುಡಿಯನ್ನು ಒಟ್ಟಿಗೆ ಸೇರಿಸಿ ಸ್ವಲ್ಪ ನೀರು ಬೆರೆಸಿ ನುಣ್ಣಗೆ ರುಬ್ಬಿಕೊಳ್ಳಬೇಕು. ಒಂದೆಲಗವನ್ನು ಬೇರುಸಮೇತ ತೆಗೆದುಕೊಂಡು, ಸ್ವಚ್ಛ ಮಾಡಿ, ಚೆನ್ನಾಗಿ ತೊಳೆದು, ಸಣ್ಣಗೆ ಹೆಚ್ಚಿಕೊಂಡು, ಸ್ವಲ್ಪ ನೀರು ಬೆರೆಸಿ ನುಣ್ಣಗೆ ರುಬ್ಬಿಕೊಳ್ಳಬೇಕು.

ನಂತರ ಬಟ್ಟೆಯ ಸಹಾಯದಿಂದ ಅದರ ರಸವನ್ನು ಹಿಂಡಿ ತೆಗೆದು ಇಟ್ಟುಕೊಳ್ಳಬೇಕು. ಒಂದೆಲಗದ ರಸವನ್ನು ಒಂದು ದಪ್ಪ ತಳದ ಪಾತ್ರೆಗೆ ಹಾಕಿ ಕಾಯಿಸಲು ಇಡಬೇಕು. ಹಸಿ ವಾಸನೆ ಹೋಗುವವರೆಗೂ ಇದನ್ನು ಕಾಯಿಸತಕ್ಕದ್ದು. ನಂತರ ಕರಗಿಸಿದ ಬೆಲ್ಲವನ್ನು ಹಾಕಿ ಮಧ್ಯಮ ಉರಿಯಲ್ಲಿ ಕಾಯಿಸಬೇಕು.

ಒಂದು ಕುದಿ ಬಂದ ಮೇಲೆ, ನುಣ್ಣಗೆ ರುಬ್ಬಿದ ಮಿಶ್ರಣವನ್ನು ಹಾಕಿ ಚೆನ್ನಾಗಿ ತಿರುಗಿಸಿ ನೀರಿನ ಅಂಶವೆಲ್ಲ ಕಡಿಮೆಯಾಗುವವರೆಗೆ ಸಣ್ಣ ಉರಿಯಲ್ಲಿ ಬೇಯಿಸಬೇಕು. ಪದೇ ಪದೆ ಕೈಯಾಡಿಸತಕ್ಕದ್ದು. ಗಟ್ಟಿಯಾಗಿ ಲೇಹದ ಹದಕ್ಕೆ ಬಂದ ನಂತರ ಏಲಕ್ಕಿ ಪುಡಿ ಮತ್ತು ತುಪ್ಪವನ್ನು ಹಾಕಿ ತಳ ಹಿಡಿಯದ ಹಾಗೆ ಮತ್ತೆ ತಿರುಗಿಸಬೇಕು. ನಂತರ ಒಲೆಯಿಂದ ಕೆಳಗಿಳಿಸಿದರೆ ಒಂದೆಲಗದ ಲೇಹ ಸಿದ್ಧ. ಇದನ್ನು ಗಾಜಿನ ಶೀಶೆಯಲ್ಲಿ ಶೇಖರಿಸಿ ಇಟ್ಟುಕೊಳ್ಳಬಹುದು. ಇದನ್ನು ಒಂದು ಚಮಚ ನಿತ್ಯವೂ ಖಾಲಿ ಹೊಟ್ಟೆಯಲ್ಲಿ ಬಿಸಿ ಹಾಲು ಅಥವಾ ಬಿಸಿ ನೀರಿನೊಂದಿಗೆ ಸೇವಿಸುವುದು ಉತ್ತಮ.



ಇದರ ಪ್ರಯೋಜನಗಳು: ಇದು ಮಕ್ಕಳ ಏಕಾಗ್ರತೆ ಮತ್ತು ಜ್ಞಾಪಕ ಶಕ್ತಿಯನ್ನು ಹೆಚ್ಚಿಸುತ್ತದೆ. ಉತ್ತಮ ನಿಯನ್ನು ನೀಡಿ ನರಗಳ ದುರ್ಬಲತೆಯನ್ನು ಸರಿಪಡಿಸುತ್ತದೆ. ದೇಹಕ್ಕೆ ತಂಪನ್ನು ಎರೆದು ಪಿತ್ತವನ್ನು ಶಮನ ಮಾಡುತ್ತದೆ. ಮಕ್ಕಳಿಗೆ ಪುಷ್ಟಿ ನೀಡಿ ಮಿದುಳಿನ ಕಾರ್ಯವನ್ನು ಚುರುಕು ಗೊಳಿಸುತ್ತದೆ.

ಮಖಾನ ಲಡ್ಡು

ಬೇಕಾಗುವ ಪದಾರ್ಥಗಳು: ಮಖಾನ (ಕಮಲದ ಬೀಜ) 4 ಬಟ್ಟಲು, ಭತ್ತದ ಅರಳು 1 ಬಟ್ಟಲು, ಒಣಕೊಬ್ಬರಿ 1 ಬಟ್ಟಲು, ಬಾದಾಮಿ 1/2 ಬಟ್ಟಲು, ಒಣದ್ರಾಕ್ಷಿ 1/4 ಬಟ್ಟಲು, ಗೋಡಂಬಿ 1/4 ಬಟ್ಟಲು, ಬೆಲ್ಲ 2 ಬಟ್ಟಲು, ಗಸಗಸೆ 2 ಚಮಚ, ಏಲಕ್ಕಿ ಪುಡಿ 1/2 ಚಮಚ, ತುಪ್ಪ 1 ಬಟ್ಟಲು.

ತಯಾರಿಸುವ ವಿಧಾನ: ಬೆಲ್ಲಕ್ಕೆ ಎರಡು ಬಟ್ಟಲು ನೀರು ಹಾಕಿ ಪಾಕ ಮಾಡಲು ಇಡಬೇಕು. ಮಧ್ಯೆ ಮಧ್ಯೆ ತಿರುಗಿಸುತ್ತಾ ಇರಬೇಕು. ಮಖಾನವನ್ನು ಗರಿಗರಿಯಾಗುವವರೆಗೆ ಸಣ್ಣ ಉರಿಯಲ್ಲಿ ಹುರಿದು ಕೊಂಡು ತಣ್ಣಗಾಗಲು ಬಿಡಿ. ಅಂತೆಯೇ, ಭತ್ತದ ಅರಳನ್ನು ಕೂಡ ಲಘುವಾಗಿ ಹುರಿದು ಕೊಳ್ಳಬೇಕು. ಒಣಕೊಬ್ಬರಿಯನ್ನು ತೇವಾಂಶ ಹೋಗುವವರೆಗೆ ಬಿಸಿ ಮಾಡಿಕೊಳ್ಳಿ. ಬಾದಾಮಿಯನ್ನು ಸಣ್ಣ ಉರಿಯಲ್ಲಿ ಹುರಿದಿಟ್ಟುಕೊಳ್ಳಬೇಕು.

ಎಲ್ಲ ಪದಾರ್ಥಗಳನ್ನು ಬೇರೆ ಬೇರೆಯಾಗಿ ಪುಡಿ ಮಾಡಿಕೊಂಡು ಬಾದಾಮಿಯನ್ನು ಮಾತ್ರ ಸ್ವಲ್ಪ ತರಿತರಿಯಾಗಿ ಪುಡಿ ಮಾಡಿಕೊಳ್ಳಬೇಕು. ಬೆಲ್ಲ ಒಂದೆಳೆ ಪಾಕ ಬಂದ ಕೂಡಲೇ ಒಲೆಯಿಂದ ಇಳಿಸಿ. ಒಣದ್ರಾಕ್ಷಿ ಮತ್ತು ಗೋಡಂಬಿಯನ್ನು ತುಪ್ಪದಲ್ಲಿ ಕೆಂಪಗಾಗುವವರೆಗೆ ಹುರಿದುಕೊಳ್ಳಬೇಕು. ಹಾಗೆಯೇ, ಗಸಗಸೆಯನ್ನು ಸಹ ಹುರಿದುಕೊಳ್ಳಬೇಕು. ಪುಡಿ ಮಾಡಿಕೊಂಡ ಎಲ್ಲ ಪದಾರ್ಥಗಳನ್ನು ಸೇರಿಸಿಕೊಂಡು, ಹುರಿದಿಟ್ಟುಕೊಂಡ ಒಣದ್ರಾಕ್ಷಿ, ಗೋಡಂಬಿ ಮತ್ತು ಗಸಗಸೆಯನ್ನು ಹಾಕಿ, ಅರ್ಧ ಬಟ್ಟಲು ತುಪ್ಪವನ್ನು ಬಿಸಿ ಮಾಡಿಕೊಂಡು ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಈಗ ಬೆಲ್ಲದ ಪಾಕವನ್ನು ನಿಧಾನವಾಗಿ ಸೇರಿಸುತ್ತಾ ಇಷ್ಟ ಬಂದ ಗಾತ್ರದ ಉಂಡೆಗಳನ್ನು ಮಾಡಬೇಕು. ಹೀಗೆ ಮಾಡಿದರೆ ಮಖಾನ ಲಡ್ಡು ಸಿದ್ಧ.

ಮಖಾನ ಲಡ್ಡುವಿನ ಲಾಭಗಳು: ಇದು ಮಕ್ಕಳಿಗೆ ಉತ್ತಮ ಪುಷ್ಟಿದಾಯಕ ಆಹಾರ. ದೇಹಕ್ಕೆ ಬಲಕರವೂ ಆಗಿದ್ದು ವಾತ-ಪಿತ್ತವನ್ನು ಶಮನ ಮಾಡು ತ್ತದೆ. ಇದು ಮೂಳೆ ಮಾಂಸ ಖಂಡಗಳ ಬೆಳವಣಿಗೆಗೆ ಸಹಾಯಕ. ಖರ್ಜೂರ ಹಲ್ವಾ ಬೇಕಾಗುವ ಪದಾರ್ಥಗಳು: ಖರ್ಜೂರ 2 ಬಟ್ಟಲು, ಕ್ಯಾರೆಟ್ 1 ಬಟ್ಟಲು, ಬೆಲ್ಲ 2 ಬಟ್ಟಲು, ಏಲಕ್ಕಿ ಪುಡಿ 1/4 ಚಮಚ, ಬಾದಾಮಿ 1/4 ಬಟ್ಟಲು, ಪಿಸ್ತಾ 1/4 ಬಟ್ಟಲು, ತುಪ್ಪ 1/2 ಬಟ್ಟಲು.

ಮಾಡುವ ವಿಧಾನ: ಮೆತ್ತಗಿರುವ ಖರ್ಜೂರವನ್ನು ತೆಗೆದುಕೊಂಡು ನೀರಿನಲ್ಲಿ ತೊಳೆದು ಕೊಳ್ಳಬೇಕು. ಅದರ ಬೀಜವನ್ನು ಬೇರ್ಪಡಿಸಬೇಕು. ಕ್ಯಾರೆಟ್ ಅನ್ನು ಹೋಳುಗಳಾಗಿ ಮಾಡಿಕೊಳ್ಳಬೇಕು. ಈಗ ಖರ್ಜೂರ ಮತ್ತು ಕ್ಯಾರೆಟ್ ಅನ್ನು ನೀರಲ್ಲಿ ಹಾಕಿ ಬೇಯಿಸಿಕೊಳ್ಳಬೇಕು. ನಂತರ ನೀರನ್ನು ಬಸಿದು ಎರಡನ್ನೂ ನುಣ್ಣಗೆ ರುಬ್ಬಿಕೊಳ್ಳಬೇಕು.

ಬಾದಾಮಿ ಮತ್ತು ಪಿಸ್ತಾವನ್ನು ಸಣ್ಣದಾಗಿ ಹೆಚ್ಚಿಕೊಂಡು ತುಪ್ಪದಲ್ಲಿ ಹುರಿದಿಟ್ಟುಕೊಳ್ಳಬೇಕು. ಒಂದು ದಪ್ಪ ತಳದ ಪಾತ್ರೆಯಲ್ಲಿ ಎರಡು ಕಪ್ಪು ನೀರನ್ನು ಹಾಕಿ, ಅದಕ್ಕೆ ಬೆಲ್ಲ ಹಾಕಿ, ಮಧ್ಯಮ ಉರಿಯಲ್ಲಿ ಕುದಿಯಲು ಇಡಬೇಕು. ಪಾಕ ಬರುವವರೆಗೂ ಅದನ್ನು ಕಾಯಿಸಿ ಪಾಕ ಬಂದ ಮೇಲೆ ರುಬ್ಬಿದ ಮಿಶ್ರಣವನ್ನು ಹಾಕಿ ಚೆನ್ನಾಗಿ ತಿರುಗಿಸಿಕೊಳ್ಳಬೇಕು. ನಂತರ ಹುರಿದಿಟ್ಟುಕೊಂಡ ಬಾದಾಮಿ, ಪಿಸ್ತಾ ಮತ್ತು ಏಲಕ್ಕಿ ಪುಡಿಯನ್ನು ಹಾಗೂ ತುಪ್ಪವನ್ನು ಹಾಕಿ ಚೆನ್ನಾಗಿ ತಿರುಗಿಸಿ, ತಳ ಬಿಟ್ಟು ಬರುವವರೆಗೂ ತಿರುಗಿಸುತ್ತಿರಬೇಕು. ಹಲ್ವಾದ ಹದಕ್ಕೆ ಬಂದ ಮೇಲೆ ಒಲೆಯಿಂದ ಕೆಳಗಿಳಿಸಿ, ಒಂದು ತಟ್ಟೆಗೆ ತುಪ್ಪ ಸವರಿ, ಅದರ ಮೇಲೆ ಹರಡಬೇಕು. ಅದನ್ನು ಬೇಕಾದ ಆಕಾರಕ್ಕೆ ಕತ್ತರಿಸಿ ತಣ್ಣಗಾಗಲು ಬಿಡಬೇಕು. ಈಗ ರುಚಿಯಾದ ಖರ್ಜೂರದ ಹಲ್ವಾ ಸಿದ್ಧ.

ಮುಖ್ಯ ಉಪಯೋಗಗಳು: ಮಕ್ಕಳ ದೇಹದ ಬೆಳವಣಿಗೆ ಮತ್ತು ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಮೂಳೆಗಳಿಗೆ ಬಲವನ್ನು ನೀಡಿ ರಕ್ತವನ್ನು ವೃದ್ಧಿ ಮಾಡುತ್ತದೆ. ಮಲಬದ್ಧತೆಯನ್ನು ನಿವಾರಿಸಿ ಮೂಲವ್ಯಾಧಿಯನ್ನು ಶಮನ ಮಾಡುತ್ತದೆ. ಸುಸ್ತು ಆಯಾಸಗಳನ್ನು ನೀಗಿಸುತ್ತದೆ.

ಆಯುರ್ವೇದದ ಪ್ರಕಾರ, ಚಳಿಗಾಲವು ದೇಹದ ಪೋಷಣೆ ಮತ್ತು ಬಲವರ್ಧನೆಗೆ ಅತ್ಯುತ್ತಮ ಕಾಲ. ಈ ಋತುವಿನಲ್ಲಿ ಮನಸ್ಸು ಮತ್ತು ದೇಹಕ್ಕೆ ಬಲವನ್ನು ನೀಡುವ ಸಾತ್ವಿಕ ಆಹಾರ ಅವಶ್ಯಕ. ಆಮ್ಲಾ ಜಾಮ, ಬ್ರಾಹ್ಮೀ ಲೇಹ, ಮಖಾನಾ ಲಡ್ಡು, ಖರ್ಜೂರ ಹಲ್ವಾ ಮುಂತಾದ ಖಾದ್ಯಗಳು ಮಕ್ಕಳಿಗೆ ಪೋಷಣೆಯ ಜತೆಗೆ ಸಂತೃಪ್ತಿಯ ಅನುಭವವನ್ನು ಕೊಡುತ್ತವೆ. ಇಂಥ ಆಹಾರಗಳು ಶೀತ ಋತುವಿನ ಅಗ್ನಿಯನ್ನು ಸಮತೋಲನಗೊಳಿಸಿ, ದೇಹವನ್ನು ದೃಢಗೊಳಿಸುತ್ತವೆ. ಹೀಗಾಗಿ, ಈ ಚಳಿಗಾಲದಲ್ಲಿ ಆಯುರ್ವೇದದ ಮಾರ್ಗದರ್ಶನದಂತೆ ಪೋಷಕ ತಿನಿಸುಗಳಿಂದ ಮಕ್ಕಳ ಆರೋಗ್ಯದ ನೆಲೆಯನ್ನು ಬಲಪಡಿಸೋಣ.

**- ಡಾ.** ಸಾಧನಾಶ್ರೀ ಪಿ,

## 02-11-2025 ದಿನ ಭವಿಷ್ಯ

**ಮೇಷ:** ನಿಮ್ಮ ಆರೋಗ್ಯ ಸುಧಾರಿಸಲು ಸಹಕಾರಿಯಾಗುವ ಕೆಲಸಗಳನ್ನು ಮಾಡಬಹುದಾದ ಒಂದು ದಿನ. ನೀವು ಇಂದು ಹಣ ಉಳಿಸುವುದು ಕಷ್ಟ ನೀವು ಇಂದು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ ನಿರ್ಲಕ್ಷ್ಯತನದಿಂದ ಕೆಲವು ಸಮಸ್ಯೆಗಳು ಖಂಡಿತ. ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ.

**ವೃಷಭ:** ಜೀವನದೆಡೆಗೆ ಉದಾರವಾದ ಮನೋಭಾವ ಹೊಂದಿ. ದೂರು ನೀಡುವುದು ಮತ್ತು ನಿಮ್ಮ ಜೀವನಮಟ್ಟದ ಬಗೆಗೆ ಅಸಮಾಧಾನ ಹೊಂದುವುದರಿಂದ ಯಾವುದೇ ಪ್ರಯೋಜನ ವಿಲ್ಲ. ಇದು ಜೀವನದ ಸುಗಂಧವನ್ನು ಹಾಳುಮಾಡುವ ಹಾಗೂ ಒಂದು ಸಮೃದ್ಧ ಜೀವನವನ್ನು ನಡೆಸುವ ಬಯಕೆಯನ್ನು ಸಾಯಿಸುವ ನೀಚ ಚಿಂತನೆಯಾಗಿದೆ.

**ಮಿಥುನ:** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ ಮತ್ತು ಅಗತ್ಯವಿರುವ ಬೆಳಕನ್ನು ನೀಡುತ್ತದೆ.

**ಕರ್ಕಾಟಕ:** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ. ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ.

**ಸಿಂಹ:** ಆಹಾರದ ಸ್ವಾದ ಉಪ್ಪಿನಿಂದ ಬರುವಂತೆ ಅತೃಪ್ತಿಯಿದ್ದಾಗಲೇ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಅದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ನೀವು ಪ್ರೀತಿಪಾತ್ರರ ಜೊತೆ ವಾದಗಳಿಗೆ ಕಾರಣವಾಗಬಹುದಾದ ವಿವಾದಾತ್ಮಕ ವಿಷಯಗಳನ್ನು ತಪ್ಪಿಸಬೇಕು.

**ಕನ್ಯಾ:** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ನಿಮ್ಮ ಅವಾಸ್ತವಿಕ ಯೋಜನೆ ಹಣದ ಕೊರತೆಗೆ ಕಾರಣವಾಗುತ್ತದೆ. ಕುಟುಂಬದೊಂದಿಗಿನ ಬಂಧಗಳು ಮತ್ತು ಸಂಬಂಧಗಳ ನವೀಕರಣದ ಒಂದು ದಿನ. ಪ್ರೇಮಪ್ರಯಾಣ ಮಧುರವಾಗಿದ್ದರೂ ಅಲ್ಪಾವಧಿಯದ್ದಾಗಿರುತ್ತದೆ.

**ತುಲಾ:** ನಿಮ್ಮ ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ. ನೀವು ಸ್ನೇಹಿತರ ಮೂಲಕ ಪ್ರಮುಖ ಸಂಪರ್ಕಗಳನ್ನು ಹೊಂದುತ್ತೀರಿ.

**ವೃಶ್ಚಿಕ:** ಧೂಮಪಾನ ತ್ಯಜಿಸುವುದು ನೀವು ದೈಹಿಕವಾಗಿ ಆರೋಗ್ಯವಾಗಿ ಉಳಿಯಲು ಸಹಾಯ ಮಾಡುತ್ತದೆ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.

**ಧನು:** ನಿಮ್ಮ ಆರೋಗ್ಯದ ಬಗ್ಗೆ ಎಚ್ಚರ ವಹಿಸಿ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ. ಇಂದು ನೀವು ಮನೆಯಲ್ಲಿ ಸೂಕ್ಷ್ಮ ಸಮಸ್ಯೆಯನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ ಮತ್ತು ಪ್ರಭಾವವನ್ನು ಬಳಸಬೇಕಾಗುತ್ತದೆ. ನಿಮ್ಮ ಹತ್ತಿರ ಉಚಿತ ಸಮಯವಿದ್ದರೆ, ಸೃಜನಾತ್ಮಕವಾಗಿ ಏನಾದರೂ ಮಾಡಲು ಪ್ರಯತ್ನಿಸಿ.

**ಮಕರ:** ನೀವು ಮನಸ್ಸಿನ ಸಮಸ್ಯೆಗಳನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ, ಜಾಣತನ ಮತ್ತು ಸಭ್ಯತೆಯನ್ನು ಬಳಸಬೇಕಾಗುತ್ತದೆ. ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಇಂದು ಹಣದ ತುಂಬಾ ಅಗತ್ಯವಿರಬಹುದು ಮತ್ತು ಜೀವನದಲ್ಲಿ ಹಣದ ಏನು ಮೌಲ್ಯವಿದೆ ಎಂದು ನಿಮಗೆ ಅರ್ಥವಾಗಬಹುದು.

**ಕುಂಭ:** ನಿಮ್ಮ ಅಧಿಕ ಚೈತನ್ಯವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು. ನಿಮ್ಮ ಮನೆಯ ಪರಿಸ್ಥಿತಿ ಸ್ವಲ್ಪ ಅನಿರೀಕ್ಷಿತವಾಗಿರುತ್ತದೆ.

**ಮೀನ:** ಜಗಳಗಂಟ ವ್ಯಕ್ತಿಯೊಂದಿಗಿನ ನಿಮ್ಮ ವಾದ ನಿಮ್ಮ ಮೂಡ್ ಅನ್ನು ಹಾಳು ಮಾಡಬಹುದು. ಜೀವನದ ಕೆಟ್ಟ ಕಾಲದಲ್ಲಿ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ ಬುದ್ಧಿವಂತಿಕೆ ತೋರಿಸಿ ಮತ್ತು ಸಾಧ್ಯವಾದರೆ ವೈಷಮ್ಯಗಳನ್ನು ತಪ್ಪಿಸಿ, ಏಕೆಂದರೆ ಜಗಳಗಳು ಹಾಗೂ ವೈಷಮ್ಯಗಳು ಯಾವತ್ತೂ ನಿಮಗೆ ಸಹಾಯ ಮಾಡುವುದಿಲ್ಲ. ಭಾವನಾತ್ಮಕ ಅಪಾಯ ನಿಮ್ಮ ಪರವಾಗಿರುತ್ತದೆ.

# ಚೀನಾದಲ್ಲಿ ಡಿಗ್ರಿ ಇಲ್ಲದಿದ್ದರೆ ದುಡ್ಡಿನ ಬಗ್ಗೆ ರೀಲ್ಸ್ ಮಾಡುವಂತಿಲ್ಲ!

ಭಾರತದಲ್ಲಿ ಹಣಕಾಸು ವಿಚಾರಗಳ ಬಗ್ಗೆ ಕಂಟೆಂಟ್ ಕ್ರಿಯೇಟರ್‌ಗಳು, ಇನ್ ಫ್ಲುಯೆನ್ಸರ್‌ಗಳಿಗೆ ನಿಯಮವಿದೆ. ಆದರೆ ಡಿಗ್ರಿ ಮಾಡಿರಲೇಬೇಕು ಎಂಬ ಚೀನಾ ಮಾದರಿಯ ನಿಯಮ ಇಲ್ಲ. ಹೀಗಿದ್ದರೂ ಷೇರು ಮಾರುಕಟ್ಟೆಯ ನಿಯಂತ್ರಕ ಸೆಬಿ ಕೆಲವು ನಿಯಮಾವಳಿಗಳನ್ನು ಜಾರಿ ಗೊಳಿಸಿದೆ. ಅದರ ಪ್ರಕಾರ ಸೆಬಿಯ ನೋಂದಾಯಿತ ಸಂಸ್ಥೆಗಳು/ಸಲಹೆಗಾರರು ಮಾತ್ರ ಸಲಹೆಗಳನ್ನು ನೀಡಬಹುದು.

ಚೀನಾದಂದು ಗಮನ ಸೆಳೆಯುವ ಕಾನೂನು ಬಂದಿದೆ. ಇನ್ನು ಮುಂದೆ ಅಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸಿಕ್ಕಸಿಕ್ಕವರೆಲ್ಲ ಹಣಕಾಸು ವಿಚಾರಗಳ ಬಗ್ಗೆ ರೀಲ್ಸ್, ವಿಡಿಯೋ, ಪಾಡ್ ಕಾ ಮಾಡುವ ಹಾಗಿಲ್ಲ. ಫೈನಾನ್ಸ್, ಆರೋಗ್ಯ, ಶಿಕ್ಷಣ, ಕಾನೂನು ವಿಷಯದ ಬಗ್ಗೆ ರೀಲ್ಸ್ ಅಥವಾ ವಿಡಿಯೋ ಮಾಡುವವರು ಸ್ವತಃ ಆಯಾ ವಿಷಯಗಳಲ್ಲಿ ಕನಿಷ್ಠ ಪದವಿಯನ್ನು ಗಳಿಸಿರಬೇಕು. ಇತರರು ಅಪ್ಪಿತಪ್ಪಿ ಏನಾದರೂ ಕಂಟೆಂಟ್ ಮಾಡಿದರೆ ಭಾರಿ ದಂಡ ಕಟ್ಟಬೇಕಾಗುತ್ತದೆ!



ಭಾರತದನಾದರೂ ಇಂಥ ಕಾನೂನು ಜಾರಿಯಾದರೆ? ಪರಿಸ್ಥಿತಿಯನ್ನು ಆಲೋಚಿಸುವುದೂ ಕಷ್ಟವಾದೀತು. ಏಕೆಂದರೆ ನಮ್ಮಲ್ಲಿ ಜ್ಯೋತಿಷಿಗಳು, ಗುರುಗಳ ಸೋಗಿನಲ್ಲಿ ಯಾರ್ಯಾರೋ, ಹಣಕಾಸು-ಸಂಪತ್ತು-ಆರೋಗ್ಯ-ರಾಜಕೀಯ ಭವಿಷ್ಯದ ತನಕ ಬ್ರಹ್ಮಾಂಡವನ್ನೂ ಗಂಟೆಗಟ್ಟಲೆ ಹೇಳಿ ಬಿಡುತ್ತಾರೆ. ಸಕಲ ಸಮಸ್ಯೆಗಳಿಗೂ ಪರಿಹಾರಗಳನ್ನು ಚಿಟಿಕೆ ಹೊಡೆದಂತೆ ಕೊಟ್ಟು ಬಿಡುತ್ತಾರೆ. ಆದರೆ ಅವರಿಗೆ ಆಯಾ ವಿಷಯಗಳಲ್ಲಿ ಪದವಿ ಇದೆಯೇ? ಡಿಗ್ರಿ, ಕಾಲೇಜು ಮೆಟ್ಟಿಲು ಹತ್ತಿದ್ದಾರೆಯೇ? ಯಾರಿಗೂ ಗೊತ್ತಿಲ್ಲ! ನಕಲಿ ಆಹಾರ ತಜ್ಞರು ಯುಟ್ಯೂಬ್ ಮೂಲಕ ಸಮಸ್ತ ಕಾಯಿಲೆಗಳಿಗೂ ಪರಿಹಾರ ಹೇಳುತ್ತಾರೆ. ಇವರು ಹೇಳುವುದರಲ್ಲಿ ಅಸಲಿ ಯಾವುದು-ನಕಲಿ ಯಾವುದು? ಸತ್ಯ-ಸುಳ್ಳು ಯಾವುದು ಎಂದು ಜಾಲಾಡಬೇಕಾಗುತ್ತದೆ.

ನಕಲಿಗಳ ಹಾವಳಿ ತಡೆಗೆ ಕಠಿಣ ಕಾನೂನು ಅವಶ್ಯಕ ಎನ್ನಿಸುತ್ತದೆ. ಆದರೆ ಇದಕ್ಕೆ ಇನ್ನೂ ವಿಭಿನ್ನ ಆಯಾಮಗಳೂ ಇವೆ. ಸಾಮಾಜಿಕ ಜಾಲತಾಣಗಳಲ್ಲಿ ವಿಷಯ-ವಸ್ತುಗಳ ನಿಖರತೆ, ವಿಶ್ವಾಸಾರ್ಹತೆ ಹೆಚ್ಚಿಸಲು ಈ ಕ್ರಮ ಅಗತ್ಯ ಎಂದು ಚೀನಾ ಈ ನಿಯಮವನ್ನು ತಂದಿದೆ. ಆದರೆ ಇದರಿಂದಾಗಿ ವಾಕ್ ಸ್ವಾತಂತ್ರ್ಯಕ್ಕೆ ಸೆನ್ಸಾರ್‌ಶಿಪ್‌ನ ಕಡಿವಾಣವಾಗಲಿದೆ ಎಂಬ ಟೀಕೆಯೂ ಕೇಳಿ ಬಂದಿದೆ.

ಆದರೆ ಭಾರತ ಮತ್ತು ಚೀನಾದ ಸರಕಾರಗಳ ವ್ಯವಸ್ಥೆ ವಿಭಿನ್ನ. ಅಲ್ಲಿ ಸರ್ವಾಧಿಕಾರಿ ಅಧ್ಯಕ್ಷರ ಆಡಳಿತ. ನಮ್ಮಲ್ಲಿ ಸಂಪೂರ್ಣ ಪ್ರಜಾಪ್ರಭುತ್ವ. ಇಲ್ಲಿ ಸ್ವಾತಂತ್ರ್ಯದ ತಂಗಾಳಿ ಹೆಚ್ಚು. ಅಲ್ಲಿನ ಪರಿಸ್ಥಿತಿ ಹಾಗಿಲ್ಲ. ಅಮೆರಿಕ ಮೂಲದ ಯುಟ್ಯೂಬ, ಫೇಸ್‌ಬುಕ್, ಎಕ್ಸ್, ಇನ್ ಸ್ಟಾಗ್ರಾಮ್ ಯಾವುದಕ್ಕೂ ಚೀನಾದಲ್ಲಿ ಅವಕಾಶ ಇಲ್ಲ.

ಈ ಭರ್ಜರಿ ನಿಷೇಧಕ್ಕೆ ಗ್ರೇಟ್ ಫೇರ್‌ವಾಲ್ ಎಂಬ ಹೆಸರಿದೆ. ಅಮೆರಿಕ ಮಾತ್ರವಲ್ಲ, ಯಾವುದೇ ವಿದೇಶದ ಜಾಲತಾಣಗಳಿಗೆ ಚೀನಾದಲ್ಲಿ ಬಾಗಿಲು ಮುಚ್ಚಲಾಗಿದೆ. ಚೀನಾದ್ದೇ ಸೋಷಿಯಲ್ ಮೀಡಿಯಾಗಳು ಇವೆ. ಜತೆಗೆ ಅದರಲ್ಲಿಯೂ ಇದೀಗ ಹೊಸ ನಿಯಮಗಳು ಜಾರಿಯಾಗುತ್ತಿವೆ. ಸೂಕ್ಷ್ಮ ವಿಚಾರಗಳನ್ನು ಜಾಲತಾಣಗಳಲ್ಲಿ ಚರ್ಚಿಸುವವರು ಡಿಗ್ರಿಗಳನ್ನು ಹೊಂದಿರಲೇಬೇಕು.

2025ರ ಅಕ್ಟೋಬರ್ 25ರಿಂದ ಈ ಹೊಸ ಕಾನೂನು ಜಾರಿಯಾಗಿದೆ. ಚೀನಾದ ಡುಯಿನ್, ವೈಬು, ಬಿಲಿಬಿಲಿ ಜಾಲತಾಣಗಳಿಗೆ ಈ ಸಂಬಂಧವಾಗಿ ಸೂಚಿಸಲಾಗಿದೆ. ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಈ ಕಾನೂನು ತರಲಾಗಿದೆ ಎಂದು ಚೀನಾದ ಸೈಬರ್ ಸ್ಪೇಸ್ ಆಡಳಿತ ತಿಳಿಸಿದೆ.

ಇನ್ ಫ್ಲುಯೆನ್ಸರ್‌ಗಳು ಇನ್ನು ಮುಂದೆ ಚೀನಾದಲ್ಲಿ ತಾವು ಮಂಡಿಸುವ ವಿಷಯಕ್ಕೆ ಸಂಬಂಧಿಸಿ, ತಮ್ಮ ಅನುಭವ, ಡಿಗ್ರಿ, ಸರ್ಟಿಫಿಕೇಶನ್, ಪ್ರೊಫೆಷನಲ್ ಲೈಸೆನ್ಸ್ ಬಗ್ಗೆ ದೃಢಪಡಿಸಬೇಕಾಗುತ್ತದೆ. ತಪ್ಪಿದರೆ 14000 ಡಾಲರ್ ತನಕ ದಂಡ ಕಟ್ಟಬೇಕಾಗುತ್ತದೆ. ರುಪಾಯಿ ಲೆಕ್ಕದಲ್ಲಿ ಇದು ಸುಮಾರು 12.50 ಲಕ್ಷವಾಗುತ್ತದೆ. ಸೋಷಿಯಲ್ ಮೀಡಿಯಾದಲ್ಲಿ ನೀಡುವ ಜಾಹೀರಾತು ಮತ್ತು ಪ್ರಮೋಷನ್‌ಗಳಿಗೂ ಕಾನೂನಿನ ಅಂಕುಶ ಬಿದ್ದಿದೆ.

ವೈದ್ಯಕೀಯ ಉತ್ಪನ್ನಗಳು, ಸಪ್ಲಿಮೆಂಟ್ಸ್ ಮತ್ತು ಹೆಲ್ತ್ ಫುಡ್‌ಗಳನ್ನು ಶೈಕ್ಷಣಿಕ ಉದ್ದೇಶದ ಹೆಸರಿನಲ್ಲಿ ಪ್ರಚಾರ ಮಾಡುವಂತಿಲ್ಲ. ಇದು ದಿಕ್ಕುತಪ್ಪಿಸುವ ಜಾಹೀರಾತಾಗುತ್ತದೆ ಎಂದು ಚೀನಾ ಸರಕಾರ ತಿಳಿಸಿದೆ.

ಹೀಗಿದ್ದರೂ, ಚೀನಿ ಸರಕಾರದ ನೀತಿಯನ್ನು ವಿರೋಧಿಸುವವರೂ ಇದ್ದಾರೆ.

ಇದರಿಂದ ಡಿಗ್ರಿ ಆದವರಿಗೆ ಮಾತ್ರ ಸೆನ್ಸಿಟಿವ್ ವಿಷಯಗಳ ಬಗ್ಗೆ ಜಾಲತಾಣಗಳಲ್ಲಿ ಚರ್ಚಿಸುವ ಹಕ್ಕು ಸಿಗುತ್ತದೆ. ಉಳಿದವರ ಮಾತಿಗೆ ಬೆಲೆ ಸಿಗದಂತಾಗುತ್ತದೆ. ಇದು ಸರಿಯಲ್ಲ ಎಂಬ ವಾದವಿದೆ. ಈ ಮಾತಿನಲ್ಲೂ ಸತ್ಯಾಂಶ ಇದೆ. ಉದಾಹರಣೆಗೆ ಒಬ್ಬ ವ್ಯಕ್ತಿ ಡಿಗ್ರಿ ಪಡೆಯದಿದ್ದರೂ, ಅನುಭವದ ಆಧಾರದಲ್ಲಿ ಯಾವುದಾದರೂ ಕ್ಷೇತ್ರದಲ್ಲಿ ಮೇಲೆ ಬಂದಿರುತ್ತಾನೆ. ಆತನಿಗೆ ಡಿಗ್ರಿ ಸರ್ಟಿಫಿಕೇಟ್ ಇಲ್ಲ ಎಂಬ ಕಾರಣ ಕೊಟ್ಟು, ಅದರ ಬಗ್ಗೆ ಮಾತನಾಡುವಂತಿಲ್ಲ ಎಂಬ ಕಾನೂನು ಹೇರಿದರೆ ಒಪ್ಪಲಾದೀತೆ? ನಮ್ಮಲ್ಲಿ ಅನೇಕ ಮಂದಿಯ ಡಿಗ್ರಿಗೂ, ಅವರು ಮಾಡುವ ಕೆಲಸಕ್ಕೂ ಯಾವುದೇ ಸಂಬಂಧವೇ ಇರುವುದಿಲ್ಲ.

ಉದಾಹರಣೆಗೆ ಎಂಜಿನಿಯರಿಂಗ್ ಓದಿದವರೂ ಪರ್ತಕರ್ತರಾಗುತ್ತಾರೆ. ಯಾವುದೋ ಕಂಪನಿಯಲ್ಲಿ ಟೆಕ್ನಿಶಿಯನ್ ಆಗಿರುತ್ತಾರೆ. ಇನ್ನು ಬಿಎ, ಕಾಮರ್ಸ್ ಕಲಿತವರೂ ಸಂಬಂಧವೇ ಇರದ ಯಾವುದೋ ಕೆಲಸಗಳನ್ನು ಮಾಡುತ್ತಿರುತ್ತಾರೆ. ಅವರಿಗೆಲ್ಲ ಇದು ನಿಮ್ಮ ಕೆಲಸವಲ್ಲ ಎಂದು ನಿರಾಕರಿಸಲು ಸಾಧ್ಯವೇ? ಇವತ್ತು ಯಾವುದೋ ಕೋರ್ಸ್ ಮಾಡಿದವರು ಯಾವುದೋ ಕೆಲಸದಲ್ಲಿ ಇದ್ದುಕೊಂಡು, ಮತ್ಯಾವುದೋ ಕಂಟೆಂಟ್‌ಗಳನ್ನು ಕ್ರಿಯೇಟ್ ಮಾಡುತ್ತಾರೆ.

ಐಟಿ ಕೆಲಸದಲ್ಲಿದ್ದವರು ಇದ್ದಕ್ಕಿದ್ದಂತೆ, ಉದ್ಯೋಗಕ್ಕೆ ರಾಜೀನಾಮೆ ಕೊಟ್ಟು ಕಂಟೆಂಟ್ ಕ್ರಿಯೇಟರ್ ಆಗಿ ಯಶಸ್ಸು ಗಳಿಸುತ್ತಾರೆ. ಅವರಿಗೆ ನಿರ್ಬಂಧ ವಿಧಿಸುವುದು ಸರಿಯೇ? ಡಿಗ್ರಿ ಓದಿದವರೂ ಜನರನ್ನು ದಾರಿ ತಪ್ಪಿಸುವುದಿಲ್ಲವೇ? ವಂಚಿಸುವುದಿಲ್ಲವೇ? ಎಂಬ ಪ್ರಶ್ನೆಗಳು ಸ್ವಾಭಾವಿಕ.

ಹಾಗಂತ ಈ ಡಿಬೇಟ್ ಅಷ್ಟು ಸುಲಭವಾಗಿ ಮುಗಿಯುವಂಥದ್ದಲ್ಲ. ಏಕೆಂದರೆ ಇವತ್ತು ಇನ್ ಫ್ಲುಯೆನ್ಸರ್‌ಗಳು ಒಂದಕ್ಕೆ ಎರಡು ವೈಭವೀಕರಿಸಿ ಹೇಳುತ್ತಾರೆ. ಲೈಕ್ಸ್, ಕಮೆಂಟ್, ಶೇರ್‌ಗಳ ಬೆನ್ನು ಬಿದ್ದು, ಸಾಂಪ್ರದಾಯಿಕ ವಿಷಯ ತಜ್ಞರೇ ಬೆಚ್ಚಿಬೀಳುವಂತೆ ಪರ್ಯಾಯ ತಜ್ಞರಾಗುತ್ತಿದ್ದಾರೆ. ಆದರೆ ಇಂಥ ಕಂಟೆಂಟ್ ಕ್ರಿಯೇಟರ್‌ಗಳು ಯಾವುದೇ ಔಪಚಾರಿಕ ಶೈಕ್ಷಣಿಕ ಅರ್ಹತೆ ಇಲ್ಲದೆಯೇ ಕೊಡುವ ಹಣಕಾಸು, ಆರೋಗ್ಯ, ಶಿಕ್ಷಣ, ಕಾನೂನು ವಿಚಾರಗಳ ವಿಶ್ವಾಸಾರ್ಹತೆ ಎಷ್ಟಿರುತ್ತದೆ? ಇದೆಷ್ಟು ಸರಿ ಎಂಬುದು ಚರ್ಚೆಯಾಗಬೇಕಾದ್ದೇ.

ಸಂಕೀರ್ಣವಾದ ವಿಷಯಗಳನ್ನು ಅತಿಯಾಗಿ ಸರಳಗೊಳಿಸಿದಾಗ, ಅದು ಜನರ ದಿಕ್ಕು ತಪ್ಪಿಸುವಂತೆ ವೇಗವಾಗಿ ಹರಡುವ ಅಪಾಯ ಜಾಲತಾಣಗಳಲ್ಲಿ ಇದ್ದೇ ಇರುತ್ತದೆ. ಇನ್ ಫ್ಲುಯೆನ್ಸರ್‌ಗಳು ಮಾರುಕಟ್ಟೆಯ ಮೇಲೆ ಗಣನೀಯ ಪ್ರಭಾವ ಬೀರುತ್ತಾರೆ. ಈ ಕಾರಣಕ್ಕಾಗಿಯೇ ಕಾರ್ಪೊರೇಟ್ ವಲಯದ ಕಂಪನಿಗಳು ಜಾಲತಾಣಗಳಿಗೆ ಜಾಹೀರಾತು ನೀಡುತ್ತಿವೆ.

ಗ್ರಾಹಕರ ವರ್ತನೆ, ಶಾಪಿಂಗ್ ನಿರ್ಧಾರಗಳ ಮೇಲೆ ಕಂಟೆಂಟ್ ಕ್ರಿಯೇಟರ್‌ಗಳು ಪ್ರಭಾವ ಬೀರುತ್ತಿರುವುದು ಸುಳ್ಳಲ್ಲ. ಆದ್ದರಿಂದ ಬ್ರ್ಯಾಂಡ್ ಸ್ಟ್ರಾಟಜಿಗಳು, ಸೋಷಿಯಲ್ ಟ್ರೆಂಡ್‌ಗಳನ್ನು ಸೃಷ್ಟಿಸುವಲ್ಲಿ ಇವರ ಪಾತ್ರ ಕಂಡುಬರುತ್ತಿದೆ. ಕಂಟೆಂಟ್ ಕ್ರಿಯೇಷನ್ ಇವತ್ತು ಅನೇಕ ಮಂದಿಗೆ ಪೂರ್ಣ ಪ್ರಮಾಣದ ಉದ್ಯೋಗವಾಗಿದೆ. ಹವ್ಯಾಸಿಗಳಿಗೆ ಆದಾಯದ ಮೂಲವಾಗಿದೆ.

ಇನ್ ಫ್ಲುಯೆನ್ಸರ್ ಮಾರ್ಕೆಟಿಂಗ್ ಟ್ರೆಂಡ್ ಕಾಣಿಸಿದೆ. ಅಂದರೆ ನಾನಾ ಬ್ರ್ಯಾಂಡ್‌ಗಳು ಭಾರಿ ಸಂಖ್ಯೆಯಲ್ಲಿ ಫಾಲೋವರ್‌ಗಳನ್ನು ಹೊಂದಿರುವ ಕಂಟೆಂಟ್ ಕ್ರಿಯೇಟರ್ಸ್ ಜತೆಗೆ ವೈಯಕ್ತಿಕವಾಗಿ ಒಪ್ಪಂದ ಮಾಡಿ ಕೊಂಡು ತಮ್ಮ ಉತ್ಪನ್ನಗಳ ಪ್ರಚಾರ ಮಾಡುತ್ತವೆ. ಈ ಇನ್ ಫ್ಲುಯೆನ್ಸರ್‌ಗಳು ತಜ್ಞರಂತೆ ಉತ್ಪನ್ನಗಳ ಬಗ್ಗೆ ಮಾತನಾಡುತ್ತಾರೆ, ಖರೀದಿಸುವಂತೆ ಜನರನ್ನು ಉತ್ತೇಜಿಸುತ್ತಾರೆ. ಅವರ ಶಿಫಾರಸುಗಳು ಮಾರುಕಟ್ಟೆಯಲ್ಲಿ ಗ್ರಾಹಕರ ಮೇಲೆ ಪ್ರಭಾವ ಬೀರುತ್ತವೆ.



ಭಾರತದಲ್ಲಿಯೂ ಇನ್ ಫ್ಲುಯೆನ್ಸರ್ ಮಾರ್ಕೆಟ್ ವೇಗವಾಗಿ ಬೆಳೆಯುತ್ತಿದೆ. ನಮ್ಮಲ್ಲಂತೂ ಚೀನಾ ಮಾದರಿಯಲ್ಲಿ ವಿದೇಶಿ ಜಾಲತಾಣಗಳಿಗೆ ಅಂಥ ಬ್ಯಾನ್ ಇಲ್ಲ. ಯುಟ್ಯೂಬ್, ಇನ್ಸ್ಟಾಗ್ರಾಮ್, ಲಿಂಕ್ಡ್ಇನ್, ಎಕ್ಸ್ ಎಲ್ಲವೂ ಮುಕ್ತ ಮುಕ್ತ. ಇಲ್ಲಿ ದಂಡಿಯಾಗಿ ಫೈನಾನ್ಸ್, ಹೆಲ್ತ್ ಇನ್ ಫ್ಲುಯೆನ್ಸರ್‌ಗಳು ಸಿಗುತ್ತಾರೆ. ಇವರು ಸಂಕೀರ್ಣ ವಿಷಯಗಳನ್ನು ಸರಳವಾಗಿ ಜನರಿಗೆ ತಿಳಿಸುವ ಶೈಕ್ಷಣಿಕ ಉದ್ದೇಶಕ್ಕಾಗಿ ಹಣಕಾಸು ಸಲಹೆಗಳನ್ನು ಕೊಡುತ್ತಾರೆ. ಇದರಿಂದ ರಿಟೇಲ್ ಹೂಡಿಕೆದಾರರಿಗೆ ಹೂಡಿಕೆಯ ತಿಳುವಳಿಕೆ ಹೆಚ್ಚುತ್ತದೆ.

ಶಾಲೆ-ಕಾಲೇಜುಗಳಲ್ಲಿ ಇಂಥ ಶಿಕ್ಷಣದ ಕೊರತೆ ಇರುವುದರಿಂದ ಯುಟ್ಯೂಬ್, ಫೇಸ್ ಬುಕ್, ವಾಟ್ಸ್ ಆಪ್‌ಗಳೇ ಅಘೋಷಿತ ವಿಶ್ವ ವಿದ್ಯಾಲಯಗಳಾಗಿವೆ. ಇಲ್ಲಿ ಪಾಮರರೇ ಪಂಡಿತರ ಪೋಸು ಕೊಟ್ಟರೆ ಮಾತ್ರ ಕಷ್ಟ. ಅದಕ್ಕಾಗಿ ಸೆಬಿಯ ಮಾರ್ಗದರ್ಶನ ಅಗತ್ಯವಾಗಿದೆ. ಕೆಲವು ಅಂದಾಜಿನ ಪ್ರಕಾರ ಇದು ವಾರ್ಷಿಕ 18 ಪರ್ಸೆಂಟ್ ಲೆಕ್ಕದಲ್ಲಿ ವೃದ್ಧಿಸುತ್ತಿದ್ದು, ಮಾರ್ಕೆಟ್ ಗಾತ್ರ 3000 ಕೋಟಿ ರುಪಾಯಿಗಳಾಗಿದೆ.

ಆಟೊಮೇಟಿವ್, ಕನ್ಸ್ಯೂಮರ್ ಗೂಡ್ಸ್ ಕೆಟಗರಿಯಲ್ಲಿರುವ ಕಂಪನಿಗಳು ಹೆಚ್ಚು ಫಾಲೋವರ್‌ಗಳನ್ನು ಹೊಂದಿರುವ ಮೈಕ್ರೊ ಮತ್ತು ನ್ಯಾನೊ-ಇನ್‌ಫ್ಲುಯೆನ್ಸರ್‌ಗಳ ಜತೆಗೆ ಒಪ್ಪಂದ ಮಾಡಿ ಕೊಳ್ಳುತ್ತಿವೆ. ಹಾಗಾದರೆ ಭಾರತದಲ್ಲಿ ಹಣಕಾಸು ವಿಚಾರಗಳ ಬಗ್ಗೆ ಕಂಟೆಂಟ್ ಕ್ರಿಯೇಟರ್‌ಗಳು, ಇನ್ ಫ್ಲುಯೆನ್ಸರ್‌ಗಳಿಗೆ ಏನಾದರೂ ನಿಯಮವಿದೆಯೇ? ಖಂಡಿತಾ ಇದೆ. ಆದರೆ ಡಿಗ್ರಿ ಮಾಡಿರಲೇಬೇಕು ಎಂಬ ಚೀನಾ ಮಾದರಿಯ ನಿಯಮ ಇಲ್ಲ. ಹೀಗಿದ್ದರೂ ಷೇರು ಮಾರುಕಟ್ಟೆಯ ನಿಯಂತ್ರಕ ಸೆಬಿ ಕೆಲವು ನಿಯಮಾವಳಿಗಳನ್ನು ಜಾರಿ ಗೊಳಿಸಿದೆ. ಅದರ ಪ್ರಕಾರ ಸೆಬಿಯ ನೋಂದಾಯಿತ ಸಂಸ್ಥೆಗಳು ಮತ್ತು ಸಲಹೆಗಾರರು ಮಾತ್ರ ಹೂಡಿಕೆಯ ಸಲಹೆಗಳನ್ನು ನೀಡಬಹುದು. ಉಳಿದವರು ಇಂಥ ಷೇರು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರಿ ಎಂದು ಯಾರಿಗೂ ಸಲಹೆಯನ್ನು ನೀಡುವಂತಿಲ್ಲ.



ಯುಟ್ಯೂಬ್, ಫೇಸ್‌ಬುಕ್, ಇನ್ಸ್ಟಾಗ್ರಾಮ್ ಮೊದಲಾದವುಗಳಲ್ಲಿ ಷೇರುಗಳ ಖರೀದಿಗೆ ರೆಕಮಂಡೇಶನ್ ಕೊಡುವಂತಿಲ್ಲ, ಮಾತ್ರವಲ್ಲದೆ ಎಜುಕೇಷನಲ್ ಕಂಟೆಂಟ್ ಮಲ್ಲಿ ಲೈವ್ ಮಾರ್ಕೆಟ್ ಡೇಟಾಗಳನ್ನು ನೀಡುವಂತಿಲ್ಲ, ಮೂರು ತಿಂಗಳು ಹಳೆಯ ಡೇಟಾಗಳನ್ನು ಮಾತ್ರ ಕೊಡಬಹುದು. ಇದು ಹೂಡಿಕೆದಾರರನ್ನು ದಿಕ್ಕು ತಪ್ಪಿಸಬಹುದು.

ಒಂದು ವೇಳೆ ಈ ನಿಯಮವನ್ನು ತಪ್ಪಿದರೆ ಅಂಥ ಕಂಟೆಂಟ್‌ಗಳನ್ನು ನಿಷೇಧಿಸಬಹುದು. ದಂಡವನ್ನು ಕೂಡ ಸೆಬಿಯು ವಿಧಿಸಬಹುದು. ಆಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಳ್ಳುವ ಸಾಧ್ಯತೆ ಇರುತ್ತದೆ. ಹೂಡಿಕೆದಾರರ ಹಿತಾಸಕ್ತಿಯನ್ನು ರಕ್ಷಿಸುವುದು ಇದರ ಉದ್ದೇಶವಾಗಿದೆ.

ಭಾರತದಲ್ಲೂ ಹಣಕಾಸು ವಿಚಾರಗಳ ಇನ್ ಫ್ಲುಯೆನ್ಸರ್‌ಗಳು ದೊಡ್ಡ ದನಿಯಾಗುತ್ತಿದ್ದಾರೆ. ಆದ್ದರಿಂದ ಸೆಬಿಯ ನಿರ್ದೇಶನದಿಂದ ಒಂದು ಕಡೆ ಹೂಡಿಕೆದಾರರ ಹಿತಾಸಕ್ತಿ ರಕ್ಷಣೆಯಾದರೆ, ಮತ್ತೊಂದು ಕಡೆ ಇನ್ ಫ್ಲುಯೆನ್ಸರ್‌ಗಳ ವಿಶ್ವಾಸಾರ್ಹತೆ, ವೃತ್ತಿಪರತೆ ಹೆಚ್ಚಲೂ ಸಹಕಾರಿಯಾಗಲಿದೆ. ಒಂದು ಪಾರದರ್ಶಕ ಚೌಕಟ್ಟು, ಉತ್ತರದಾಯಿತ್ವ ಇರುವುದು ಉತ್ತಮ ಎನ್ನುತ್ತಾರೆ ಕಂಟೆಂಟ್ ಕ್ರಿಯೇಟರ್ ನೇಹಾ ನಗರ್.

ಸೆಬಿಯ 2025ರ ಇನ್ವೆಸ್ಟರ್ಸ್ ಸರ್ವೆ ಪ್ರಕಾರ 62 ಪರ್ಸೆಂಟ್ ರಿಟೇಲ್ ಹೂಡಿಕೆದಾರರು ಸೋಷಿಯಲ್ ಮೀಡಿಯಾದಲ್ಲಿ ಇನ್ ಫ್ಲುಯೆನ್ಸರ್‌ಗಳ ರೆಕಮಂಡೇಷನ್‌ಗಳನ್ನು ಕೇಳಿಕೊಂಡು ಹೂಡಿಕೆ ಮಾಡಿರೆ! ಸೆಬಿಯ ಪ್ರಕಾರ ಇನ್ ಫ್ಲುಯೆನ್ಸರ್‌ಗಳು ತಾವು ಪ್ರಮೋಟ್ ಮಾಡುವ ಉತ್ಪನ್ನಗಳು ಮತ್ತು ಅವುಗಳ ಕಂಪನಿಗಳ ಜತೆಗೆ ವ್ಯಾವಹಾರಿಕ ಸಂಬಂಧ ಇದ್ದರೆ, ಅದನ್ನು ಬಹಿರಂಗಪಡಿಸಬೇಕು. ಅವುಗಳನ್ನು ಗೌಪ್ಯವಾಗಿಟ್ಟು ಹಣಕಾಸು ವಿಚಾರಗಳನ್ನು ಹೇಳುವಂತಿಲ್ಲ, ಉತ್ಪನ್ನಗಳ ಪ್ರಚಾರ ಮಾಡುವಂತಿಲ್ಲ, ಷೇರು ಹೂಡಿಕೆಯ ಶಿಫಾರಸು ದೂರದ ಮಾತು.

ಸೋಶಿಯಲ್ ಇನ್ ಫ್ಲುಯೆನ್ಸರ್‌ಗಳಿಗೆ ಸ್ವಯಂ ನಿಯಂತ್ರಣವೂ ಅಗತ್ಯ. ಇದು ಹೆಚ್ಚು ಪರಿಣಾಮ ಕಾರಿ. ಭಾರತದಲ್ಲಿ ಸಾಂಪ್ರದಾಯಿಕ ಮಾಧ್ಯಮಗಳು ಈ ಹಿಂದಿನಿಂದಲೂ ಇದನ್ನು ಪಾಲಿಸುತ್ತಾ ಬಂದಿವೆ. ಆದರೆ ಜಾಲತಾಣಗಳಲ್ಲಿ ಕಂಟೆಂಟ್ ಕ್ರಿಯೇಟರ್‌ಗಳೂ ಇದೇ ಹಾದಿಯಲ್ಲಿದ್ದರೆ, ಅವರ ವಿಶ್ವಾಸಾರ್ಹತೆಯೂ ವೃದ್ಧಿಸುತ್ತದೆ. ಇಲ್ಲದಿದ್ದರೆ ಕಠಿಣ ಕಾಯಿದೆಗಳು ಭವಿಷ್ಯದ ದಿನಗಳಲ್ಲಿ ಅನಿವಾರ್ಯವಾಗಬಹುದು.

**- ಕೇಶವ** ಪ್ರಸಾದ್ ಬಿ

# ಭಾವ ಲಹರಿ

## ಸಮಾಜಕ್ಕೆ ಮಾರಕ ಹನಿಟ್ರ್ಯಾಪ್ ಘಟನೆಗಳು

■ **ಇತ್ತೀಚೆಗೆ ಕರಾವಳಿ ಭಾಗದಲ್ಲಿ ನಡೆದ ಅಭಿಷೇಕ್ ಆಚಾರ್ಯ ಸಾವಿನ ಪ್ರಕರಣ, ಶಿಕ್ಷಣ ಸಂಸ್ಥೆಯ ಮುಖ್ಯಸ್ಥ, ರಾಜಕಾರಣಿಯೋರ್ವರ ಸಹೋದರನ ಆತ್ಮಹತ್ಯೆ ಪ್ರಕರಣ, ಬಸ್ ಮಾಲಕರೋರ್ವರ ಹತ್ಯೆ ಸೇರಿದಂತೆ ರಾಜ್ಯದ ನಾನಾ ಭಾಗಗಳಲ್ಲಿ ಹನಿಟ್ರ್ಯಾಪ್ ಪ್ರಕರಣದಲ್ಲಿ ಹೆಣ್ಣು ಮಕ್ಕಳನ್ನು ಮುಂದಿಟ್ಟು ಕೊಂಡು ನಡೆಸುವ ದಂಧೆಗೆ ಸಾವಿನ ಪ್ರಕರಣಗಳು ಹೆಚ್ಚಾಗುತ್ತಿದೆ.**



ನಮ್ಮ ಸಮಾಜದಲ್ಲಿ ಹಾಗೂ ದೈನಂದಿನ ವ್ಯವಸ್ಥೆಯಲ್ಲಿ ಹಲವಾರು ಅಪರಾಧ ಚಟುವಟಿಕೆಗಳನ್ನು ಕಾಣುತ್ತಿದ್ದೇವೆ. ಕಳೆದ ಕೆಲ ವರ್ಷಗಳಿಂದಂತೂ ವಂಚನೆ, ಅಪರಾಧ, ಅಮಾನವೀಯ ಘಟನೆಗಳಿಗೆ ಲಗಾಮೇ ಇಲ್ಲದಂತಾಗಿದೆ. ಇದಕ್ಕೆ ನಮ್ಮ ಕಾನೂನಿನಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯೋ ಅಥವಾ ಮಾದಕ ವಸ್ತುಗಳ ಪ್ರೇರಣೆಯೋ, ರಾಜಕೀಯ, ಪ್ರಭಾವಿ ಇಲಾಖೆ, ಪ್ರಭಾವಿಗಳ ಕೃಪಾಕಟಾಕ್ಷವೋ, ಕಾನೂನಿನ ಭಯದ ಕೊರತೆಯೋ ಆ ದೇವರೇ ಬಲ್ಲ ಎಂಬಂತಿದೆ ಸದ್ಯದ ಪರಿಸ್ಥಿತಿ.

ದುಡ್ಡು ಗಳಿಸಲು, ಮೋಜು ಮಸ್ತಿಗಾಗಿ, ಐಷಾರಾಮಿ ಬದುಕಿಗಾಗಿ ಮನುಷ್ಯ ಯಾವ ಹಂತಕ್ಕೂ ಇಳಿಯಲು ಹೇಸುವವನಲ್ಲ ಎಂಬಂತಿದೆ. ಮಾನವೀಯತೆ, ಮನುಷತ್ವ ಎಂಬುದು ಸ್ವಾರ್ಥ ಚಿಂತನೆಯ ಮುಂದೆ ಸತ್ತೇ ಹೋದಂತಿದೆ. ಇತ್ತೀಚಿನ ದಿನಗಳಲ್ಲಿ ಹನಿಟ್ರ್ಯಾಪ್ ಎಂಬ ಜಾಲ ಸಕತ್ತಾಗಿ ಸದ್ದು ಮಾಡುತ್ತಿದೆ.

ಸಾಮಾನ್ಯ ಜನರಿಂದ ಹಿಡಿದು ಪ್ರಭಾವಿ ವ್ಯಕ್ತಿಗಳವರೆಗೂ ಈ ಜಾಲದ ವರ್ತುಲದೊಳಗೆ ಸಿಲುಕಿ ನರಳಿ ಪ್ರಾಣ ಕಳೆದುಕೊಂಡದ್ದಕ್ಕೆ ಲೆಕ್ಕವಿಲ್ಲದಂತಿದೆ. ಈ ಜಾಲದ ಬಳಿಕ ನಡೆಯುವ ಬ್ಲ್ಯಾಕ್ ಮೇಲ್ ತಂತ್ರಕ್ಕೆ ಬಹು ದೊಡ್ಡ ಪ್ರಮಾಣದಲ್ಲಿ ದುಡ್ಡು ಕಳೆದುಕೊಂಡವರ ಸಂಖ್ಯೆಯೇ ಕಾಣ ಸಿಗುತ್ತದೆ.

ಮರ್ಯಾದೆ, ಘನತೆಗೆ ಅಂಜಿ ದೂರು ನೀಡಲು ಪ್ರಭಾವಿಗಳು ಹಿಂದೇಟು ಹಾಕುವ ಕಾರಣಕ್ಕೆ ಈ ದಂಧೆ ದೊಡ್ಡ ಮಟ್ಟದಲ್ಲಿ ಇಂದು ವಿಸ್ತರಿಸಿಕೊಳ್ಳುತ್ತಿದೆ. ಈ ಜಾಲದ ಸುಳಿಗೆ ಸಿಲುಕಿ ಮತ್ತೆ ಮತ್ತೆ ಹಣ ಕೊಟ್ಟು ಅಂತಿಮವಾಗಿ ನೇಣಿಗೆ ಶರಣಾದ ಅದೆಷ್ಟೋ ಮಂದಿ ನಮ್ಮ ಸಮಾಜದಲ್ಲಿ ಕಾಣ ಸಿಗುತ್ತಾರೆ.

ಇತ್ತೀಚೆಗೆ ಕರಾವಳಿ ಭಾಗದಲ್ಲಿ ನಡೆದ ಅಭಿಷೇಕ್ ಆಚಾರ್ಯ ಸಾವಿನ ಪ್ರಕರಣ, ಶಿಕ್ಷಣ ಸಂಸ್ಥೆಯ ಮುಖ್ಯಸ್ಥ, ರಾಜಕಾರಣಿಯೋರ್ವರ ಸಹೋದರನ ಆತ್ಮಹತ್ಯೆ ಪ್ರಕರಣ, ಬಸ್ ಮಾಲಕರೋರ್ವರ ಹತ್ಯೆ ಸೇರಿದಂತೆ ರಾಜ್ಯದ ನಾನಾ ಭಾಗಗಳಲ್ಲಿ ಹನಿಟ್ರ್ಯಾಪ್ ಪ್ರಕರಣದಲ್ಲಿ ಹೆಣ್ಣು ಮಕ್ಕಳನ್ನು ಮುಂದಿಟ್ಟುಕೊಂಡು ನಡೆಸುವ ದಂಧೆಗೆ ಸಾವಿನ ಪ್ರಕರಣಗಳು ಹೆಚ್ಚಾಗುತ್ತಿದೆ.

ಈ ಹನಿಟ್ರ್ಯಾಪ್‌ಗೆ ಬಹುಮುಖ್ಯವಾಗಿ ಮದುವೆ ವಿಚಾರವನ್ನು ಮುಂದಿಟ್ಟುಕೊಂಡು, ಖಾಸಗಿ ಕ್ಷಣಗಳ ವೀಡಿಯೋ ಬಳಸಿ, ಸಮಾಜದಲ್ಲಿನ ಪ್ರಭಾವಿ ಗಣ್ಯ ವ್ಯಕ್ತಿಗಳನ್ನು ಮುಂದಿಟ್ಟುಕೊಂಡು ಸ್ವತಃ ಪತಿಯೇ ತನ್ನ ಪತ್ನಿಯನ್ನು ಬೇರೊಬ್ಬರ ಬಳಿ ಕಳುಹಿಸಿ ವೀಡಿಯೋ ಚಿತ್ರೀಕರಿಸಿ ಹಣ ದೋಚಿದ ಉದಾಹರಣೆಗಳಿವೆ.

ಅಲ್ಲದೇ ಕೊಲೆ ಕೃತ್ಯಕ್ಕೆ, ಪಾತಕ ಕೃತ್ಯಗಳಿಗೆ ಕೂಡ ಹೆಣ್ಣು ಮಕ್ಕಳನ್ನು ಬಳಸಿಕೊಳ್ಳುವ ಹಂತಕ್ಕೆ ತಲುಪಿದೆ. ಕರಾವಳಿ ಪ್ರದೇಶದಲ್ಲಿ ಇಬ್ಬರು ಖಡಕ್ ಪೊಲೀಸ್ ಅಧಿಕಾರಿಗಳ ಕಾರ್ಯವೈಖರಿಯಿಂದ ಪಾತಕ, ಅಕ್ರಮ ಚಟುವಟಿಕೆಗಳಿಗೆ ಸಂಪೂರ್ಣ ಬ್ರೇಕ್ ಬಿದ್ದಿದೆ.

ಪ್ರಸ್ತುತ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡಿದೆ ಪೊಲೀಸ್ ಇಲಾಖೆ. ಆದರೆ ಮೈಸೂರು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಇತ್ತೀಚೆಗೆ ನಡೆಯುತ್ತಿರುವ ಗ್ಯಾಂಗ್ ವಾರ್ ಗಳು, ಹಾಡಹಗಲೇ ದರೋಡೆ, ಪ್ರತಿಕಾರದ ಹತ್ಯೆಗಳಿಗೆ ಪುಂಡರು ಮುನ್ನುಡಿ ಬರೆದಿರುವುದು ಒಂದು ರೀತಿ ಸಮಾಜದಲ್ಲಿ ಭೀತಿ ಹುಟ್ಟಿಸುವಂತಿದೆ.

ಕೊಲೆ ಕೃತ್ಯಗಳಲ್ಲಿ ಭಾಗಿಯಾಗುವ ಪುಡಿ ರೌಡಿಗಳು ಜೈಲಿನಿಂದಲೇ ಮತ್ತೊಂದು ಹತ್ಯೆಗೆ ಸ್ಕೆಚ್ ಹಾಕುವುದು, ಕೋರ್ಟ್ ಆವರಣದಲ್ಲಿ ಶೋಕಿ, ಆವಾಝ್ ಹಾಕುವುದು, ಜೈಲಿನಲ್ಲಿ ಮೋಜು-ಮಸ್ತಿ, ಪಾರ್ಟಿ, ಐಷಾರಾಮಿ ಬದುಕು ಆರು ತಿಂಗಳಲ್ಲಿ ಜಾಮೀನು ಮಂಜೂರು ಇಷ್ಟರ ಒಂದು ಕೊಲೆಯ ಅಧ್ಯಾಯ ಮುಗಿದು ಬಿಡುತ್ತದೆ.

ಇನ್ನು ಆನ್‌ಲೈನ್ ವಂಚನಾ ಜಾಲವು ಕೂಡ ಸಾಕಷ್ಟು ಸದ್ದು ಮಾಡುತ್ತಿದೆ. ಇಲ್ಲೂ ಅವಿದ್ಯಾವಂತ ರಷ್ಟೇ ಪ್ರಮಾಣದಲ್ಲಿ ವಿದ್ಯಾವಂತರೇ ದುಡ್ಡು ಕಳೆದುಕೊಂಡ ನಿದರ್ಶನಗಳಿವೆ. ಇಲ್ಲೂ ವೀಡಿಯೋ ಕಾಲ್ ಚಿತ್ರೀಕರಿಸಿ ಹಣ ದೋಚುವುದು, ಜಾಲತಾಣಗಳ ನಕಲಿ ಖಾತೆ ಸೃಷ್ಟಿಸಿ ಹಣಕ್ಕೆ ಬೇಡಿಕೆ ಇಡುವುದು, ದೂರವಾಣಿ ಸಂಖ್ಯೆಯನ್ನೇ ಬಳಸಿ ಹಣಕ್ಕಾಗಿ ಬೇಡಿಕೆ ಇಡುವುದು ಮುಂತಾದ ಕಾರಣಗಳಿಗಾಗಿ ವೈದ್ಯರು, ಎಂಜಿನಿಯರ್, ಕೃಷಿಕರು, ರಾಜಕಾರಣಿಗಳು, ಮಹಿಳೆಯರು ಸುಳ್ಳು ಸಂದೇಶವನ್ನೇ ಸತ್ಯವೆಂದು ನಂಬಿ ಹಣ ಕಳೆದುಕೊಂಡು ಪರಿತಪಿಸಿದ ಉದಾಹರಣೆಗಳಿವೆ.

ಸಾಮಾಜಿಕ ಜಾಲತಾಣಗಳಲ್ಲಿ ಜಾಹೀರಾತಿನ ನೆಪವೊಡ್ಡಿ, ಲೋನ್ ಮಂಜೂರಾಗಿರುವುದಾಗಿ ತಿಳಿಸಿ ಅನಾಮಿಕ ಲಿಂಕ್‌ಗಳನ್ನು ಕಳುಹಿಸಿ ಆಧಾರ್, ಪಾನ್, ಬ್ಯಾಂಕ್ ಖಾತೆ ವಿವರ ಓಟಿಪಿ ಪಡೆದು ಲಕ್ಷಗಟ್ಟಲೇ ಹಣ ದೋಚುವ ಆನ್‌ಲೈನ್ ನಕಲಿ ಕಿರಾತಕರಿಗೇನು ಪ್ರಸ್ತುತ ಸಮಾಜದಲ್ಲಿ ಕೊರತೆಯಿಲ್ಲ.

ಇನ್ನು ಹಣ ದ್ವಿಗುಣಗೊಳಿಸುವ ಯೋಜನೆ, ಗೃಹೋಪಯೋಗಿ ವಸ್ತು, ಫ್ಲ್ಯಾಟ್ ಮುಂತಾದವುಗಳಿಗೆ ತಿಂಗಳ ಹೂಡಿಕೆಯಂತಹ ಸ್ಕೀಮ್‌ಗಳು ಅಲ್ಲಲ್ಲಿ ಕಂಡು ಬರುತ್ತಿದ್ದು, ಇವುಗಳ ಪೈಕಿ ಕೆಲವೊಂದು ಸಂಸ್ಥೆಗಳು ಹೂಡಿಕೆದಾರರಿಗೆ ಪಂಗನಾಮ ಹಾಕಿ ಪರಾರಿಯಾದ ಘಟನೆಯಲ್ಲಿ ಇತ್ತ ಹೂಡಿಕೆಯ ಹಣವೂ ಇಲ್ಲದೆ ಅತ್ತ ವಸ್ತುವೂ ಸಿಗದೆ ಮೋಸ ಹೋದ ಘಟನೆಗಳಿವೆ.

ಇನ್ನು ಸಂಸ್ಕೃತ ಶಿಕ್ಷಣ ಸಂಸ್ಥೆಯ ಶಿಕ್ಷಕರೋರ್ವರು ಮೊಬೈಲ್‌ನಲ್ಲಿ ಸಂಬಂಧಿಕರೊಡನೆ ಮಾತನಾಡಿದರೆಂಬ ಕಾರಣಕ್ಕೆ ವಿದ್ಯಾರ್ಥಿಗೆ ಕಾಲಿನಿಂದ ಒದ್ದು ಮನಬಂದಂತೆ ಥಳಿಸುತ್ತಿರುವ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಸಾಕಷ್ಟು ಆಕ್ರೋಶಕ್ಕೆ ಕಾರಣವಾಗಿ ಕೊನೆಗೆ ಆ ಶಿಕ್ಷಕನ ಬಂಧನವು ನಡೆದಿದೆ. ಇಂತಹ ಘಟನೆಗಳು ಆಗಾಗ್ಗೆ ನಮ್ಮ ಸಮಾಜದಲ್ಲಿ ಮರುಕಳಿಸುತ್ತಿದೆ. ಈ ಹಿಂದೆ ಹೆತ್ತ ತಾಯಿಯನ್ನೇ ಕುಡಿದ ಮತ್ತಿನಲ್ಲಿ ಸ್ವಂತ ಮಗನೇ ಮನ ಬಂದಂತೆ ಥಳಿಸಿ ಎತ್ತಿ ಎಸೆದು, ಕ್ರೌರ್ಯ ಮೆರೆದ ಘಟನೆಯು ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿದ್ದು ಸುಳ್ಳಲ್ಲ.

ಇಂದಿನ ಆಧುನಿಕ ವಾತಾವರಣ, ಸಾಮಾಜಿಕ ಮಾಧ್ಯಮಗಳ ಪ್ರಭಾವ, ದುಶ್ಚಟಗಳು, ಅಮಲು ಪದಾರ್ಥಗಳ ಮಿತಿಮೀರಿದ ಸೇವನೆ ಇವೆಲ್ಲವೂ ಹದಿಹರೆಯದ ಯುವ ಸಮುದಾಯವನ್ನು ಅಪರಾಧ ಚಟುವಟಿಕೆಗಳಿಗೆ ಸೆಳೆಯುತ್ತಿರುವುದನ್ನು ಕಾಣಬಹುದು. ಅಪರಾಧ ಕೃತ್ಯ ನಡೆಸುವುದು, ಸುಲಿಗೆ, ದರೋಡೆ ಪ್ರಕರಣಗಳಲ್ಲಿ ಪುಂಡರು ಭಾಗಿಯಾಗುವುದು ಒಂದು ಭಾಗವಾದರೆ ಇಂತಹವರನ್ನು ರಕ್ಷಿಸಲೆಂದೇ ಒಂದಷ್ಟು ಪ್ರಭಾವಿಗಳು ನಮ್ಮ ಸಮಾಜದಲ್ಲಿರುವುದು ಮತ್ತೊಂದು ವಿಶೇಷ.

ಯಾವುದೇ ಗಂಭೀರ ಪ್ರಕರಣಗಳು ಸಂಭವಿಸಿದರೂ ಕಾನೂನಿನ ಕಣ್ಣು ತಪ್ಪಿಸಿ ವ್ಯವಹಾರ ನಡೆಸಿ ಅಪರಾಧಿಗಳನ್ನು ಕಾನೂನಿನ ಕುಣಿಕೆಯಿಂದ ಹೊರತರುವ ವ್ಯವಸ್ಥೆಗಳಿರುವಾಗ, ಹಣದ ಪ್ರಭಾವಕ್ಕೆ ವ್ಯವಸ್ಥೆಗಳು ಮಣಿಯುವಾಗ ಅಪರಾಧ ಚಟುವಟಿಕೆಗಳು ಸಮಾಜದಲ್ಲಿ ಸಲೀಸಾಗಿ ನಡೆಯುತ್ತಿದೆ.

ಇನ್ನು ಭಾರತೀಯ ಕೌಟುಂಬಿಕ ವ್ಯವಸ್ಥೆಗಳ ಸದ್ಯದ ಪರಿಸ್ಥಿತಿ ಕೂಡ ಆಧುನಿಕ ವ್ಯವಸ್ಥೆಯಲ್ಲಿ ನಲುಗಿ ಹೋಗಿದೆ. ವೈವಾಹಿಕ ಸಂಬಂಧಗಳು ಕೂಡ ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಉನ್ನತ ಶ್ರೇಣಿಯ ಶಿಕ್ಷಣ, ಲಕ್ಷಗಟ್ಟಲೇ ಸಂಬಳದ ಕಾರಣಕ್ಕೆ ಪತಿ ಪತ್ನಿಯನ್ನು ಅವಲಂಬಿತರಾಗುವ ಹಾಗೂ ಪತ್ನಿ ಪತಿಯನ್ನು ಅವಲಂಬಿತರಾಗುವ ಪ್ರಮೇಯವೇ ಪ್ರಸ್ತುತ ದಿನಗಳಲ್ಲಿ ಇಲ್ಲದೆ ಇರುವುದು, ದಾಂಪತ್ಯ ಜೀವನದಲ್ಲಿ ತಾಳ್ಮೆ, ಸಹನೆ ಎನ್ನುವುದು ನಶಿಸಿ ಹೋಗಿರುವ ಕಾರಣಕ್ಕೆ, ಕ್ಷುಲ್ಲಕ ವಿಚಾರಗಳಿಗೆ ಮದುವೆಯಾದ ತಿಂಗಳೊಳಗೆ ವಿಚ್ಛೇದನ ಪ್ರಕರಣಗಳು ಸಮಾಜದಲ್ಲಿ ಮಿತಿ ಮೀರುತ್ತಿದೆ.

ಆಧುನಿಕ ಬದುಕಿನ ಶೈಲಿಗೆ ಕುಟುಂಬ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುವ ಸಂತಾನ ವ್ಯವಸ್ಥೆಗಳು ನಶಿಸುತ್ತಿರುವುದು, ಫ್ಯಾಷನ್, ಸೌಂದರ್ಯದ ಮೋಡಿಗೆ ಮಕ್ಕಳಿಂದ ಹೊರತಾದ ದಾಂಪತ್ಯ ಜೀವನವನ್ನು ಹೆಣ್ಣು ಮಕ್ಕಳು ಬಯಸುವುದು ಕೂಡ ಕುಟುಂಬ ವ್ಯವಸ್ಥೆಗೆ ಮಾರಕವೆಂದರೂ ತಪ್ಪಾಗಲಾರದು.

ಇನ್ನು ದಾಂಪತ್ಯ ಜೀವನದಲ್ಲಿ ಕೌಟುಂಬಿಕ ಕಲಹಗಳು, ಆಸ್ತಿ ಅಂತಸ್ತಿಗಾಗಿ ದಾಯಾದಿ ಕಲಹಗಳು, ಅನೈತಿಕ ಸಂಬಂಧಗಳು ಕುಟುಂಬವನ್ನೇ ಇಬ್ಭಾಗವನ್ನಾಗಿಸುವ ಘಟನೆಗಳು ಕೂಡ ನಮ್ಮ ಸಮಾಜದಲ್ಲಿದೆ. ಕೂಡು ಕುಟುಂಬಗಳು, ಅವಿಭಕ್ತ ಕುಟುಂಬಗಳಿಂದ ಕೂಡಿದ್ದ ಸಂಸ್ಕಾರಯುತ ಬದುಕಿನ ಕುಟುಂಬ ಪದ್ಧತಿ ಇಂದು ಆಧುನಿಕ ಸೌಕರ್ಯ, ಸೆಲೆಬ್ರಿಟಿಗಳ ಅನುಕರಣೆ, ಫ್ಯಾಷನ್ ಜಗತ್ತಿನ ಮಧ್ಯೆ, ಜಾಲತಾಣಗಳ ಪ್ರಭಾವದ ಮಧ್ಯೆ ಯಾಂತ್ರಿಕೃತವಾದ ಬದುಕಿನ ಶೈಲಿಗೆ ಮನುಷ್ಯ ಇಂದು ಮಾರುಹೋಗುತ್ತಿರುವುದು ಸುಳ್ಳಲ್ಲ.

ನಮ್ಮ ಪೂರ್ವಜರು ಹಾಕಿ ಕೊಟ್ಟ ಸಂಸ್ಕೃತಿಯ ತಳಹದಿಯನ್ನು ಯಾವುದೋ ಅಂಧಾನುಕರಣೆಗೆ ಎಳ್ಳು ನೀರು ಬಿಟ್ಟಿರುವ ನಾವು ಮಾನವೀಯ ಗುಣ ನಶಿಸಿ ಹೋದ ಸಮಾಜದಲ್ಲಿ ಪರಿತಪಿಸ ಬೇಕಾದ ಸ್ಥಿತಿಗತಿಗಳು ಮುಂದಿನ ಪೀಳಿಗೆಗೆ ಎದುರಾದರೂ ಅಚ್ಚರಿಯಿಲ್ಲ.

**- ಆದರ್ಶ್ ಶೆಟ್ಟಿ,** ಉಪ್ಪಿನಂಗಡಿ

## ಕನ್ನಡ ಕವನಗಳು ★★★★★

### ಕರ್ನಾಟಕ ನಾಮಕರಣದ ದಿನ



ಕನ್ನಡ ಎಂದರೆ ಹೊನ್ನಿನ ನುಡಿಯು
ಮಣ್ಣಿನ ಕಣಕಣವು/
ಅನ್ನದ ಋಣವನು ತೀರಿಸು ಮಗುವೆ
ಚಿನ್ನದ ಗುಣವದುವು//
ಕನ್ನಡ ನೆಲಜಲ ಮರೆಯದಿರು
ಮುನ್ನುಡಿ ಬರೆಯುತಲಿ/
ಕನ್ನಡ ಗಾಳಿಯ ಉಸಿರಾಡುತಲಿ
ನಿನ್ನೆಯ ನೆನಪಿರಲಿ//
ಅಆಇಈ ಅಕ್ಷರ ಮಾಲೆ
ಹೊಳೆಯುವ ಮುತ್ತುಮಣಿ/
ಏರಿಸಿ ಹಾರಿಸಿ ಕನ್ನಡ ಧ್ವಜವನು
ಗೌರವ ಸಲಿಸುತಲಿ//
ನಾಡಗೀತೆಯ ಹಾಡುತ ಮುದದಿ
ತಾಯಿಗೆ ವಂದನೆ ಮಾಡುತಲಿ/
ಭೇದಭಾವ ನಮ್ಮಲಿ ಬೇಡ
ಮನುಜರೆಲ್ಲ ಒಂದೇ//
ಕನ್ನಡ ಭಾಷೆ ತಾಯಿ ಭಾಷೆ
ಕೂಗಿ ಹೇಳುತಲಿ/
ಅನ್ಯ ಭಾಷೆ ದ್ವೇಷಿಸ ಬೇಡ
ವ್ಯವಹಾರಕೆ ಇರಲಿ//
ಕರ್ನಾಟಕ ನಾಮಕರಣದ ದಿನವು
ಭಾಷಾ ವೈಭವವು/
ಸಂಭ್ರಮ ಸಡಗರ ಸಂಸ್ಕೃತಿ ಮೆರುಗಲಿ
ಬೆರೆಯುತ ನಲಿಯುತಲಿ//
ಹಿರಿಯ ಹೋರಾಟಗಾರರ ನೆನಪಿಸುತಲಿ
ಬಾಳಿಗೆ ನಾಂದಿಯ ಹಾಡುತಲಿ/
ಗಂಧದ ಚಂದದ ಬೀಡೆನುತಲಿ
ಕನ್ನಡಮ್ಮನ ಸೇವೆಯ ಮಾಡುತಲಿ//
ಅಮ್ಮನ ಮಮತೆಯ ಮಡಿಲಿನ ಕುಡಿಗಳು
ಅರಳುವ ಪುಷ್ಪಗಳು/
ಹೇಳುತ ಜೈ ಭುವನೇಶ್ವರಿ ಮಾತೆ
ಜೇನಿನ ಸವಿಯ ಬೆರೆಸುತಲಿ//

**- ರತ್ನಾ ಕೆ ಭಟ್ ತಲಂಜೇರಿ,** ಪುತ್ತೂರು

### ಮೀನು

ನಿನ್ನದೇನಿದೆಯೋ...ದೋಣಿಯಲ್ಲಿ ಬಂದು ದೊಡ್ಡ ಬಲೆಯನ್ನು ಬೀಸಿ ನಮ್ಮನ್ನ ಹಿಡಿದುಕೊಂಡು ಹೋಗಿ ಮಾರುಕಟ್ಟೆಯಲ್ಲಿ ಬೆಲೆ ಕಟ್ಟಿ ಮಾರ್ತೀರಾ ನನಗೆ ಒಂದು ದಿನವೂ ಆಹಾರ ಹಾಕಿದವರಲ್ಲ ಒಳ್ಳೆಯ ನೀರನ್ನ ಬದುಕೋಕೆ ಬಿಟ್ಟವರಲ್ಲ... ಸಣ್ಣವರು ದೊಡ್ಡವರಲ್ಲದೆ ಪ್ರತಿಯೊಬ್ಬರನ್ನ ನಿಮ್ಮ ಸ್ವಾರ್ಥಕ್ಕೆ ಬಳಸಿಕೊಂಡವರು... ನಮಗೂ ಬದುಕಿದೆ ಕುಟುಂಬವಿದೆ ಸ್ವಾತಂತ್ರವಿದೆ ಅನ್ನೋದನ್ನ ನೀವು ಯಾವತ್ತೂ ಗಮನಿಸಿ ಇಲ್ಲ. ನಿಮಗೆ ಒಂದು ದಿನವ ಅನಿಸಿಲ್ವಾ ನಮ್ಮ ಸಾವಿನಿಂದ ನೀವು ಬದುಕ್ತಾ ಇದ್ದೀರಿ ಅಂತ. ಒಂದು ಸಲ ಯೋಚನೆ ಮಾಡಿ ನೋಡಿ... ಹೀಗಂತ ಸಾಲಾಗಿ ಇಟ್ಟಿದ್ದ ಬೇರೆ ಬೇರೆ ಜಾತಿಯ ಮೀನುಗಳು ನನ್ನನ್ನು ನೋಡಿ ಹೇಳುವುದಕ್ಕೆ ಆರಂಭ ಮಾಡಿದವು... ಕೇಳಿಸಿಕೊಂಡೆ ಕೆಲವನ್ನ ಮನೆಯ ಪದಾರ್ಥಕ್ಕೆ ತೆಗೆದುಕೊಂಡೆ ಹೋದೆ.



## ಹಿಮಾಲಯದಿಂದ ಬರುವ ಗದ್ದೆ ಗೊರವ

ರಜೆ ಬಂತು ಎಂದರೆ ನಾವೆಲ್ಲಾದರೂ ಸುತ್ತಾಡಲು ಹೋಗೋಣ ಎಂದು ಅನ್ನಿಸುವುದು ಸಹಜ ಅಲ್ಲವೇ. ಕುಟುಂಬದ ಸದಸ್ಯರ ಜೊತೆ ಸ್ನೇಹಿತರ ಜೊತೆ ಎಲ್ಲಾದರೂ ಹೋಗಿಬರೋಣ ಎಂದು ಯೋಚಿಸುತ್ತೇವೆ ಅಲ್ಲವೇ. ಹಕ್ಕಿಗಳೂ ಹೀಗೆ ರಜೆಗೆ ಎಲ್ಲಾದರೂ ಹೋಗುತ್ತವೆಯೇ ಎಂದು ನನ್ನ ಮಗಳು ಒಂದು ದಿನ ಕೇಳಿದಳು. ಒಳ್ಳೆ ಪ್ರಶ್ನೆ ಎಂದುಕೊಂಡು ಆ ಬಗ್ಗೆ ಮಾಹಿತಿಗಾಗಿ ಹುಡುಕಾಡಿದೆ.

ಹಕ್ಕಿಗಳು ಜಗತ್ತಿನ ಎಲ್ಲ ಭೂಭಾಗಗಳಲ್ಲೂ ನೋಡಲು ಸಿಗುತ್ತವೆ. ಭೂಮಿಯ ಮೇಲೆ ಹವಾಮಾನ ಎಲ್ಲ ತಿಂಗಳಲ್ಲೂ ಒಂದೇ ರೀತಿ ಇರುವುದಿಲ್ಲ. ಕೆಲವು ತಿಂಗಳು ಬಿಸಿಲು ಜಾಸ್ತಿ ಇದ್ದರೆ ಇನ್ನು ಕೆಲವು ತಿಂಗಳು ಚಳಿ ಜಾಸ್ತಿ ಇರುತ್ತವೆ. ಚಳಿ ಜಾಸ್ತಿ ಆದಾಗ ಕೆಲವು ಕಡೆ ಹಿಮಪಾತ ಅಂದರೆ ಐಸ್ ಬೀಳುತ್ತದೆ. ಕೆರೆ, ಸರೋವರದ ನೀರೆಲ್ಲ ಮಂಜುಗಡ್ಡೆ ಆಗಿ ಎಲ್ಲ ಕಡೆ ಬಿಳೀ ಬಣ್ಣದ ಮಂಜಿನ ಹೊದಿಕೆ ಆವರಿಸಿಕೊಳ್ಳುತ್ತದೆ. ಹಗಲಿನ ಸೂರ್ಯನ ಓರೆ ಬಿಸಿಲು ಬಿದ್ದರೂ ಮಂಜು ಕರಗುವುದಿಲ್ಲ. ಭೂಮಿಯ ಉತ್ತರಾರ್ಧ ಗೋಳದಲ್ಲಿ ಈಗ ಅಂತಹ ಚಳಿಗಾಲ ಪ್ರಾರಂಭವಾಗಿದೆ. ಭಾರತದ ಉತ್ತರ ಭಾಗದಲ್ಲಿರುವ ಹಿಮಾಲಯದಲ್ಲೂ ಈಗ ಚಳಿಗಾಲ.

ಚಳಿಗಾಲ ಪ್ರಾರಂಭವಾದರೆ ಎಲ್ಲ ಕಡೆ ಮಂಜಿನ ಪದರ ಆವರಿಸಿಕೊಳ್ಳುವುದರಿಂದ ಆಹಾರ ಮತ್ತು ನೀರು ಸಿಗುವುದು ಸ್ವಲ್ಪ ಕಷ್ಟ. ಹೀಗಾದಾಗ ಅಲ್ಲೇ ವಾಸಿಸುವ ಕೆಲವು ಪ್ರಾಣಿಗಳು ಚಳಿಗಾಲ ಮುಗಿಯುವ ತನಕ ದೀರ್ಘ ನಿದ್ರೆಗೆ ಜಾರಿಕೊಳ್ಳುತ್ತವೆಯಂತೆ. ಆದರೆ ಅಲ್ಲಿ ವಾಸಿಸುವ ಕೆಲವು ಜಾತಿಯ ಹಕ್ಕಿಗಳು ಮಾತ್ರ ಇದಕ್ಕೆ ಬೇರೆಯದೇ ಉಪಾಯ ಕಂಡುಕೊಂಡಿವೆ.

ಉತ್ತರದ ಹಿಮಾಲಯ ಮತ್ತು ಅದರ ಆಸುಪಾಸಿನ ಬಯಲುಗಳಲ್ಲಿ ವಾಸಿಸುವ ಕೆಲವು ಹಕ್ಕಿಗಳು ಚಳಿಗಾಲ ಬಂತು ಎಂದರೆ ದಕ್ಷಿಣ ಭಾರತದ ಕಡೆಗೆ ವಲಸೆ ಬರುತ್ತವೆ. ಇಲ್ಲೂ ಚಳಿಗಾಲವೇ ಆದರೂ ನೀರು ಮಂಜುಗಡ್ಡೆ ಆಗುವ ಸಮಸ್ಯೆ ಇಲ್ಲ, ಮಾತ್ರವಲ್ಲ ಮಳೆಗಾಲ ಕಳೆದು ನೀರಿನ ಮೂಲಗಳಲ್ಲಿ ಸಮೃದ್ಧವಾಗಿ ಬೆಳೆದ ಜಲಚರ ಜೀವಿಗಳೂ ಸಿಗುತ್ತವೆ, ಇತರೆ ಸಸ್ಯಮೂಲದ ಆಹಾರವೂ ಸಾಕಷ್ಟು ಸಿಗುತ್ತದೆ. ಹೀಗೆ ಸಾಮಾನ್ಯವಾಗಿ ಬರುವ, ಎಲ್ಲಕಡೆ ಕಾಣಲು ಸಿಗುವ ಹಕ್ಕಿಯೊಂದನ್ನು ಇವತ್ತು ಪರಿಚಯ ಮಾಡಿಕೊಳ್ಳೋಣ.

ನಿಮ್ಮ ಮನೆಯ ಆಸುಪಾಸಿನಲ್ಲಿ ಗದ್ದೆ, ಕೆರೆ, ನೀರು ಹರಿಯುವ ಸಣ್ಣ ತೋಡು ಅಥವಾ ದೊಡ್ಡ ನದಿಯೇ ಇದ್ದರೂ ನೀವು ಈ ಹಕ್ಕಿಯನ್ನು ನೋಡಬಹುದು. ಸಮುದ್ರದ ಬದಿಗೆ ಸೂರ್ಯಾಸ್ತ ನೋಡಲು ಹೋಗುತ್ತೀರಿ ಎಂದಾದರೆ ಸ್ವಲ್ಪ ಕಡಿಮೆ ಜನಜಂಗುಳಿ ಇರುವ ಪ್ರದೇಶದಲ್ಲಿ ನೀವು ಬಹಳ ಸುಲಭವಾಗಿ ಈ ಹಕ್ಕಿಯನ್ನು ನೋಡಬಹುದು.

ಗಾತ್ರದಲ್ಲಿ ಕೋಳಿಮರಿಗಿಂತ ಸ್ವಲ್ಪ ದೊಡ್ಡದು. ಹೊಟ್ಟೆಯ ಭಾಗ ಚಂದದ ಬಿಳೀ ಬಣ್ಣ, ರೆಕ್ಕೆ, ಮುಖ ಕತ್ತಿನ ಭಾಗ ಹಸುರು ಮಿಶ್ರಿತ ಬೂದು ಬಣ್ಣ. ನೇರವಾದ ಕೊಕ್ಕು. ನೀರಿನ ಮೂಲಗಳ ಅಂಚಿನಲ್ಲಿ ಬಾಲ ಮತ್ತು ದೇಹವನ್ನು ಕುಣಿಸುತ್ತಾ ಕೆಸರು ಮಣ್ಣನ್ನು ಕೆದಕಿ ಕೀಟಗಳು, ಏಡಿಯ ಮೊಟ್ಟೆ ಮೊದಲಾದ ಜಲಮೂಲದ ಆಹಾರಗಳನ್ನು ಹುಡುಕುತ್ತಾ ಇರುತ್ತದೆ. ಭಯವಾದಾಗ ತಕ್ಷಣ ಹಾರಿ ನೀರಿನಮೇಲೆ ಅಥವಾ ಬದಿಯಲ್ಲಿ ತೇಲುತ್ತಾ ಸಾಗಿದಂತೆ ಹಾರಿ ದೂರ ಹೋಗುತ್ತದೆ. ನಿಮ್ಮ ಆಸುಪಾಸಿನಲ್ಲಿ ಈ ಹಕ್ಕಿ ಈಗಾಗಲೇ ಹಿಮಾಲಯದಿಂದ ಬಂದಿರಬಹುದು.

- ಅರವಿಂದ ಕುಡ್ಲ, ಬಂಟ್ವಾಳ



**"ಕಾಳಿಂಗ ಸರ್ಪವು ಅತಿ ಅಪರೂಪದ ಒಂದು ಉರಗ. ಕರ್ನಾಟಕದ ಕೆಲವೇ ಪ್ರದೇಶಗಳಲ್ಲಿ ಕಂಡು ಬರುವ ಇವುಗಳನ್ನು, ಅವುಗಳ ಸಹಜ ವಾಸಸ್ಥಳದಲ್ಲಿ ನೋಡಿದವರೇ ಕಡಿಮೆ! ನಮ್ಮ ಹಳ್ಳಿಯಲ್ಲಿ, ಅಂದರೆ ಉಡುಪಿ ಜಿಲ್ಲೆಯ ಅರೆ ಮಲೆನಾಡು ಮತ್ತು ಮಲೆನಾಡು ಪ್ರದೇಶದಲ್ಲಿ ನಾಗರಹಾವನ್ನು ಸಾಕಷ್ಟು ಸಂಖ್ಯೆಯಲ್ಲಿ ಕಾಣಬಹುದು; ಆದರೆ, ಕಾಳಿಂಗ ಸರ್ಪ ಅಪರೂಪ. ನಮ್ಮ ಹಳ್ಳಿಯ ಸರಹದ್ದಿನಲ್ಲಿ ಅವು ಇವೆ ಎಂಬುದು ನಿಜ; ಅಥವಾ ಹಿಂದಿನ ದಿನಳಲ್ಲಿ ಅಲ್ಲಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವಾಸಿಸಿರ ಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಬಹು ಅಪರೂಪ."**

## ಕಾಳಿಂಗ ಮತ್ತು ನಾಗರ ಎರಡನ್ನೂ ಪೂಜಿಸುವ ನಾಡಿದು!



ನಮ್ಮ ಹಳ್ಳಿಯಲ್ಲಿ ಕಾಳಿಂಗ ಸರ್ಪವನ್ನು ನಾನು ಕಂಡದ್ದೇ ಇಲ್ಲ; ನಮ್ಮ ಹಳ್ಳಿಯವರೂ ಕಂಡಿರಲಿಲ್ಲ. ಆದರೆ ಈಚಿನ ದಶಕದಲ್ಲಿ ಅಲ್ಲಲ್ಲಿ ಅಪರೂಪಕ್ಕೆ ಕಾಣಿಸುತ್ತಿದೆ ಎಂದು ವರದಿಯಾಗಿದೆ. ಇದಕ್ಕೆ ಸಂವಾದಿಯಾಗಿ, ನಾಗರಹಾವು ನಮ್ಮ ಹಳ್ಳಿಗಳಲ್ಲಿ ಹೇರಳ! ಮತ್ತು ಸಾಕಷ್ಟು ಕಡೆ ಕಾಣಿಸುತ್ತವೆ.

ಮಲೆನಾಡಿನಲ್ಲಿ, ಅದರಲ್ಲೂ ಮುಖ್ಯವಾಗಿ ಆಗುಂಬೆಯ ಸರಹದ್ದಿನಲ್ಲಿ, ಈಗ ಕೆಲವು ವಾರಗಳಿಂದ ಕಾಳಿಂಗ ಸರ್ಪದ ಸುದ್ದಿ ಹರಿದಾಡುತ್ತಿದೆ. ಕಾಳಿಂಗ ಸರ್ಪವು ಅತ್ಯಪರೂಪದ ರಗಪ್ರಭೇದವಾಗಿದ್ದು, ಅದನ್ನು ರಕ್ಷಿಸಲು, ಪ್ರಯೋಗಕ್ಕೆ ಒಳಪಡಿಸಲು ಸರಕಾರದ ಅನುಮತಿ ಬೇಕು; ಆದರೆ, ಅಂಥ ಸಮರ್ಪಕ ಅನುಮತಿ ಇಲ್ಲದೇ ಕೆಲವರು ಇದನ್ನು ಫೋಟೋಶೂಟ್‌ನಂಥ ಚಟುವಟಿಕೆಗಳಿಗೆ ಬಳಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಅದರಲ್ಲೂ ಮುಖ್ಯವಾಗಿ, ಅಧ್ಯಯನ ಮತ್ತು ಚಾರಣದ ಸೋಗಿನಲ್ಲಿ, ರಕ್ಷಿತ ಜೀವಿ ಎಂದೇ ಗುರುತಿಸಲ್ಪಟ್ಟಿರುವ ಕಾಳಿಂಗ ಸರ್ಪದ ಫೋಟೋ ತೆಗೆಯುವ ಚಟುವಟಿಕೆಗೆ ಪ್ರಚಾರ ನೀಡಿ, ಫೋಟೋ ತೆಗೆದು, ಅವುಗಳಿಗೆ ತೊಂದರೆ ನೀಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದ್ದು, ಇದು ನಿಜವಾದರೆ ಖಂಡನಾರ್ಹ.

ಕಾಳಿಂಗ ಸರ್ಪವು ಅತಿ ಅಪರೂಪದ ಒಂದು ಉರಗ. ಕರ್ನಾಟಕದ ಕೆಲವೇ ಪ್ರದೇಶಗಳಲ್ಲಿ ಕಂಡು ಬರುವ ಇವುಗಳನ್ನು, ಅವುಗಳ ಸಹಜ ವಾಸಸ್ಥಳದಲ್ಲಿ ನೋಡಿದವರೇ ಕಡಿಮೆ! ನಮ್ಮ ಹಳ್ಳಿಯಲ್ಲಿ, ಅಂದರೆ ಉಡುಪಿ ಜಿಲ್ಲೆಯ ಅರೆ ಮಲೆನಾಡು ಮತ್ತು ಮಲೆನಾಡು ಪ್ರದೇಶದಲ್ಲಿ ನಾಗರಹಾವನ್ನು ಸಾಕಷ್ಟು ಸಂಖ್ಯೆಯಲ್ಲಿ ಕಾಣಬಹುದು; ಆದರೆ, ಕಾಳಿಂಗ ಸರ್ಪ ಅಪರೂಪ. ನಮ್ಮ ಹಳ್ಳಿಯ ಸರಹದ್ದಿನಲ್ಲಿ ಅವು ಇವೆ ಎಂಬುದು ನಿಜ; ಅಥವಾ ಹಿಂದಿನ ದಿನಳಲ್ಲಿ ಅಲ್ಲಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವಾಸಿಸಿರ ಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಬಹು ಅಪರೂಪ. ಆಗುಂಬೆ, ಹೆಬ್ರಿ, ಸನಿಹದ ಕಬ್ಬಿನಾಲೆ, ಸೋಮೇಶ್ವರ ಮೊದಲಾದ ಕಾಡು ಪ್ರದೇಶಗಳಲ್ಲಿ ಅವುಗಳ ಪಾಡಿಗೆ ಅವು ವಾಸಿಸುತ್ತಿವೆ ಮತ್ತು ಜನರ ಕಣ್ಣಿಗೆ ಬೀಳುವುದು ಕಡಿಮೆ.

ಆದರೆ, ಹಿಂದೆ ಅವು ಸಾಕಷ್ಟು ಸಂಖ್ಯೆಯಲ್ಲಿ ಇದ್ದಿರಲೇಬೇಕು. ಅದಕ್ಕೆ ಪುರಾವೆಯಾಗಿ, ಉಡುಪಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕಾಡಿಯ ಅಥವಾ ಕಾಡ್ಯ ಎಂದು ಅವುಗಳನ್ನು ಗುರುತಿಸಿ, ಗೌರವಿಸಿ, ಪೂಜಿಸುವ ಪದ್ಧತಿ ಇಂದಿಗೂ ಇದೆ.

ಇವನ್ನು ಪೂಜಿಸುವ ಪರಂಪರೆಯ ಭಾಗವಾಗಿ, ಕಾಡ್ಯನಾಟ ಎಂಬ ನೃತ್ಯಸಹಿತ ಪೂಜಾ ಪದ್ಧತಿಯೂ ಚಾಲ್ತಿಯಲ್ಲಿದ್ದು, ಇದರ ಕುರಿತು ಪ್ರೊ.ಎ.ವಿ.ನಾವಡ ಅವರು ಮೊದಲಿಗೆ ವ್ಯಾಪಕವಾಗಿ ಸಂಶೋಧನೆ ಮಾಡಿ, ಗ್ರಂಥವನ್ನೂ (1980 ದಶಕದಲ್ಲಿ) ಹೊರತಂದಿದ್ದಾರೆ. ನಾಗಮಂಡಲ ಎಂಬ ಪ್ರಸಿದ್ಧ ಪೂಜಾಪದ್ಧತಿಯಲ್ಲಿ ನಾಗರಹಾವನ್ನು ಆರಾಧಿಸಿದರೆ, ಕಾಡ್ಯನಾಟ ಪದ್ಧತಿಯಲ್ಲಿ ಕಾಳಿಂಗ ಸರ್ಪವನ್ನು ಆರಾಧಿಸುವ ಕ್ರಮವಿದೆ.

ಈಗಲೂ ಕಾಡ್ಯನಾಟ ಅಲ್ಲಲ್ಲಿ ನಡೆಯುತ್ತಿದ್ದರೂ, ನಾಗಮಂಡಲಕ್ಕೆ ಹೋಲಿಸಿದರೆ ಪ್ರಚಾರ ತುಸು ಕಡಿಮೆ. ಕುಂದಾಪುರ ತಾಲೂಕಿನ ಕಾಳಾವರ ಎಂಬಲ್ಲಿನ ಸುಬ್ರಹ್ಮಣ್ಯ ದೇಗುಲದಲ್ಲಿ ಕಾಳಿಂಗ ಸರ್ಪನ ಆರಾಧನೆಯ ಪದ್ಧತಿ ಇದೆ ಎಂದು ಗುರುತಿಸಲಾಗಿದೆ. ಅಂದರೆ, ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನಲ್ಲಿ, ನಾಗರಹಾವಿನ ಜತೆಯಲ್ಲೇ, ಕಾಳಿಂಗ ಸರ್ಪನನ್ನೂ ಪೂಜಿಸುವ ಪದ್ಧತಿ ಇದೆ ಎಂಬುದು ಸ್ಪಷ್ಟ.

ನಮ್ಮ ಹಳ್ಳಿಯಲ್ಲಿ ಕಾಳಿಂಗ ಸರ್ಪವನ್ನು ನಾನು ಕಂಡದ್ದೇ ಇಲ್ಲ; ನಮ್ಮ ಹಳ್ಳಿಯವರೂ ಕಂಡಿರಲಿಲ್ಲ. ಆದರೆ ಈಚಿನ ದಶಕದಲ್ಲಿ ಅಲ್ಲಲ್ಲಿ ಅಪರೂಪಕ್ಕೆ ಕಾಣಿಸುತ್ತಿದೆ ಎಂದು ವರದಿಯಾಗಿದೆ. ಇದಕ್ಕೆ ಸಂವಾದಿಯಾಗಿ, ನಾಗರಹಾವು ನಮ್ಮ ಹಳ್ಳಿಗಳಲ್ಲಿ ಹೇರಳ! ಮತ್ತು ಸಾಕಷ್ಟು ಕಡೆ ಕಾಣಿಸುತ್ತವೆ. ಕಾಳಿಂಗ ಸರ್ಪ ಮತ್ತು ನಾಗರಹಾವುಗಳೆರಡನ್ನೂ ಕರಾವಳಿ ಮತ್ತು ಮಲೆನಾಡಿನ ಜನರು ಆರಾಧಿಸುತ್ತಾರೆ; ಎಷ್ಟರ ಮಟ್ಟಿಗೆ ಎಂದರೆ, ಇವುಗಳನ್ನು ಸಾಮಾನ್ಯವಾಗಿ ಸಾಯಿಸುವುದಿಲ್ಲ, ಅಸಲು ಅವುಗಳಿಗೆ ಗಾಯವನ್ನೂ ಮಾಡುವುದಿಲ್ಲ!

ಬಯಲುಸೀಮೆಯಲ್ಲಿ ಅಲ್ಲಲ್ಲಿ ಹಾವು ಎಂದಾಕ್ಷಣ, ಅದು ನಾಗರಹಾವೇ ಆಗಿರಲಿ, ಬಡಿದು ಸಾಯಿಸುವುದುಂಟು. ಆದರೆ, ಕರಾವಳಿಯಲ್ಲಿ ನಾಗರಹಾವನ್ನು ಕೊಲ್ಲುವ ಕ್ರಮವೇ ಇಲ್ಲ, ಅದೆಷ್ಟೋ ತೊಂದರೆ ಕೊಟ್ಟಿದ್ದರೂ! ಅದು ದೇವರ ಹಾವು ಅಂದರೆ ದೇವರ ಸ್ವರೂಪ ಎಂದು ಆರಾಧಿಸುವ ಪದ್ಧತಿ ಅಲ್ಲುಟು, ಕಾಳಿಂಗ ಸರ್ಪಕ್ಕೂ ಸಹ.

ಬಾಲ್ಯದಲ್ಲಿ ನಮ್ಮ ಹಳ್ಳಿಯಲ್ಲಿ ಜನರೊಡನೆ ನಾಗರಹಾವಿನ ಮುಖಾಮುಖಿಯಾಗಿದ್ದನ್ನು ಹಲವು ಬಾರಿ ನಾನು ಕಂಡಿದ್ದೆ. ಬೇಸಗೆಯ ಬಿಸಿಲು ಕಾಡತೊಡಗಿತು ಎಂದರೆ, ಎಲ್ಲೆಡೆ ಸೆಕೆ, ತಾಪ. ಅತ್ತ ಭೂಮಿಯೂ ಬಿಸಿಯಾಗುತ್ತದೆ, ಭೂಮಿಯ ಒಳಗೂ ತಾಪಮಾನ ಏರುತ್ತದೆ. ನಮ್ಮ ಹಳ್ಳಿಯಲ್ಲಿ ಇಂಥ ದಿನಗಳಲ್ಲಿ ತಲೆದೋರುವ ಸಮಸ್ಯೆ ಎಂದರೆ, ನೆಲದಿಂದ ಹೊರಬರುವ ಉರಗಗಳು! ಬಿಸಿಲಿನಿಂದ ನೆಲ ಕಾದಂತೆಲ್ಲಾ, ನೆಲದೊಳಗೆ ಶಿಶಿರ ನಿದ್ರೆ ಮಾಡುತ್ತಿರುವ ಅಥವಾ ತಮ್ಮ ತಾಣದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಹಾವುಗಳು, ಚೇಳುಗಳು ಮೇಲಕ್ಕೆ ಬರುವುದುಂಟು.

ಹೀಗೆ ಬೇಸಗೆಯಲ್ಲಿ ಹೊರಬರುವ ಹಾವುಗಳಿಂದಾಗಿ, ಸಾಕಷ್ಟು ಅಪಾಯಕಾರಿ ಸನ್ನಿವೇಶಗಳೂ ಎದುರಾಗುತ್ತಿದ್ದುದುಂಟು. ಪಾಪ, ಆ ಹಾವುಗಳಿಗೆ ತಾವು ಸಂಚರಿಸುವ ದಾರಿಯು ಮನುಷ್ಯನ ದಾರಿ ಎಂದು ಹೇಗಾದರೂ ಗೊತ್ತಾಗಬೇಕು? ತಮ್ಮ ಪಾಡಿಗೆ ತೆವಳಿಕೊಂಡು ಹೋಗುತ್ತಿರುವಾಗ, ಅವನ್ನು ನೋಡದ ಮನುಷ್ಯನು ಅವುಗಳ ಮೇಲೆ ಕಾಲಿಟ್ಟರೆ, ಅವು ಕಚ್ಚುತ್ತಿದ್ದುದುಂಟು.

ಆ ದಾರಿಯಲ್ಲಿ ನಡೆಯುತ್ತಿದ್ದವನ ಗ್ರಹಚಾರ ನೆಟ್ಟಗಿದ್ದರೆ, ಆ ಹಾವು ವಿಷರಹಿತ ಹಾವು ಆಗಿರ ಬಹುದು; ಆದರೆ, ವಿಷಕಾರಿ ಹಾವು ಕಚ್ಚಿದರೆ, ಪ್ರಾಣಾಪಾಯದ ಸಂದರ್ಭ ಇದ್ದದ್ದೇ.



ಇಂಥದೊಂದು ದುರಂತಕ್ಕೆ ಒಮ್ಮೆ ಸಾಕ್ಷಿಯಾಗಿದ್ದೆ. ನಾವು ಆರೆಂಟು ಮಕ್ಕಳು, ಶಾಲೆ ಮುಗಿಸಿಕೊಂಡು ಬಂದು, ಸಂಜೆಯ ಹೊತ್ತಿನಲ್ಲಿ ಮನೆಯ ಮುಂದಿನ ಅಗೇಡಿಯಲ್ಲಿ ಚಿನ್ನಿದಾಂಡು ಆಡುತ್ತಿದ್ದೆವು.

ಇನ್ನೇನು ಕತ್ತಲಾಗುವ ಸಮಯ; ಯಾರೋ ಹೊಡೆದ ಚಿನ್ನಿಯು, ಅಗೇಡಿಯ ಅಂಚಿನ ಸಣ್ಣ ತೋಡಿನತ್ತ ಹೋಗಿ ಬಿತ್ತು. ಅದು ಬೇಸಗೆಯ ಸಮಯ; ಅಗೇಡಿಯಲ್ಲಾಗಲೀ, ತೋಡಿನಲ್ಲಾಗಲೀ ನೀರಿರಲಿಲ್ಲ. ತೋಡಿನ ಉದ್ದಕ್ಕೂ ಹಳು, ಮುಂಡುಕನ ಗಿಡ, ಕುಸುಬನ ಗಿಡ ಎಲ್ಲವೂ ಬೆಳೆದಿದ್ದವು. ನಮ್ಮ ಜತೆಯಲ್ಲಿ ಆಡುತ್ತಿದ್ದ, ಪಕ್ಕದ ಮನೆಯ ಸುಬ್ಬಣ್ಣ ಆ ಚಿನ್ನಿಯನ್ನು ಹುಡುಕುತ್ತಾ ಆ ತೋಡಿನಂಚಿಗೆ ಹೋದ.

ಹಾವು ಕಚ್ಚಿತೋ ಎಂದು ಕೂಗುತ್ತಾ ಅವನು ವಾಪಸು ಬಂದಿದ್ದಷ್ಟೇ ಗೊತ್ತು; ನಾವೆಲ್ಲರೂ ಮನೆಗೆ ಓಡಿದೆವು. ಪಂಡಿತರನ್ನು ಕರೆಸಿದರು. ಸುಬ್ಬಣ್ಣನನ್ನು ಕಾಲಿನ ಮೇಲೆ ಮಲಗಿಸಿಕೊಂಡು, ನಾರು-ಬೇರಿನ ರಸವನ್ನು ಅವರು ಕುಡಿಸುತ್ತಿದ್ದ ದೃಶ್ಯ ನೆನಪಿದೆ; ಚಿಮಿಣಿ ಬೆಳಕಿನಲ್ಲೇ ಸುಬ್ಬಣ್ಣ ಮಲಗಿದ್ದು, ಆ ನಂತರ ಆತ ನಮ್ಮನ್ನು ಅಗಲಿದ್ದು ಎಲ್ಲವೂ ಮಸುಕಾಗಿ ನೆನಪಿದೆ.

ಹಳ್ಳಿಯ ಜೀವನವು ಸುಂದರ ಎಂಬುದರಲ್ಲಿ ಅನುಮಾನವಿಲ್ಲವಾದರೂ, ದೂರದ ಗ್ರಾಮೀಣ ಪ್ರದೇಶದ ಜನರು ಇಂಥ ರಿಸ್ಕ್‌ಗಳನ್ನು ಎದುರಿಸುತ್ತಲೇ ಜೀವನ ಸಾಗಿಸಬೇಕಾದ ಅನಿವಾರ್ಯತೆ ಇತ್ತು; ಈಚಿನ ದಶಕಗಳಲ್ಲಿ ನಮ್ಮೂರಿನಲ್ಲಿ ಆಸ್ಪತ್ರೆಯಾಗಿರುವುದರಿಂದ, ಅಷ್ಟರ ಮಟ್ಟಿಗೆ ಪರವಾಗಿಲ್ಲ. ಬೇಸಗೆಯ ಸಮಯದಲ್ಲಿ, ನೆಲದ ತಾಪಮಾನ ಏರುವುದರಿಂದಾಗಿ, ಹಾವು ಮೊದಲಾದವುಗಳು ನೆಲದ ಮೇಲೆ ಓಡಾಡುವಾಗ, ಇಂಥದೊಂದು ರಿಸ್ಕ್ ಈಗಲೂ ಇದೆ. ಒಂದು ರೀತಿಯಲ್ಲಿ ನೋಡಿದರೆ, ನಮ್ಮ ಮನೆ ಅಂಗಳವು ಹಾವು ಮತ್ತು ಕಪ್ಪೆಗಳ ಪ್ಲೇಗ್ರೌಂಡ್ ಎನ್ನಬಹುದು!

ಇಲ್ಲಿ ಪ್ಲೇ ಎಂದರೆ, ಕಪ್ಪೆಯು ಹಾವಿನೊಂದಿಗೆ ಆಡಲೇಬೇಕಾದ ಜೀವನ್ಮರಣದ ಆಟ. ಅಂಗಳದ ಒಂದು ತುದಿಯಲ್ಲಿ ಬಗ್ಗುಬಾವಿ; ಒರಟು ಕಲ್ಲುಗಳನ್ನೇ ಜೋಡಿಸಿ ಅದಕ್ಕೆ ಕಟ್ಟಪ್ಪಣೆ ಮಾಡಲಾಗಿದ್ದರಿಂದ, ಆ ಕಲ್ಲುಗಳ ಸಂದಿಯಲ್ಲಿ ಹತ್ತಿಪ್ಪತ್ತು ಒಳ್ಳೆ ಹಾವುಗಳು (ವಿಷರಹಿತ) ವಾಸಿಸುತ್ತಿದ್ದವು!

ಬಡಪಾಯಿ ಕಪ್ಪೆಗಳು ಅಲ್ಲೆಲ್ಲಾದರೂ ಸುಳಿದರೆ, ಅವುಗಳನ್ನು ಹಿಡಿದು ತಿನ್ನಲು ಕಾಯುತ್ತಿದ್ದವು. ಅಂಗಳದ ಒಂದು ತುದಿಯಿಂದ ಕುಪ್ಪಳಿಸುತ್ತಾ ಬರುವ ಕಪ್ಪೆಯು, ಇನ್ನೊಂದು ತುದಿಗೆ, ಅಂದರೆ ನಮ್ಮ ಮನೆಯತ್ತ ಬರುವುದು ರೂಢಿ; ಅದನ್ನು ಅಟ್ಟಿಸಿಕೊಂಡು ಬರುವ ಹಾವು, ಕಪ್ಪೆಯನ್ನು ಗಬಕ್ಕನೆ ಕಚ್ಚಿಕೊಂಡು, ವಾಪಸು ತನ್ನ ತಾವಾದ ಬಗ್ಗು ಬಾವಿಯ ಕಲ್ಲುಗಳ ಸಂದಿಗೆ ಓಡುವುದುಂಟು. ಆಗ, ಅದರ ಬಾಯಲ್ಲಿ ಸಿಕ್ಕಿಕೊಂಡ ಕಪ್ಪೆಯ ಓಂಕ್ ವಾಂಕ್ ಎಂದು ಆರ್ತನಾದ ಮಾಡುವಾಗ ಅದನ್ನು ನೋಡಿದ ನಮ್ಮಂಥ ಮಕ್ಕಳಿಗೆ ಕನಿಕರ ಮೂಡುತ್ತಿತ್ತು.



ಹಾವು ಅಟ್ಟಿಸಿಕೊಂಡು ಬಂದಾಗ, ಕಪ್ಪೆಯು ನಮ್ಮ ಅಡುಗೆ ಮನೆಯತ್ತ ಧಾವಿಸಿ ಬರುತ್ತಿದ್ದವು ಎಂದೆನಲ್ಲ, ಅದು ಇಂದಿಗೂ ನನಗೆ ಒಂದು ಪುಟ್ಟವಿಸ್ಮಯವಾಗಿಯೇ ಕಾಣಿಸುತ್ತದೆ. ಬೇಸಗೆಯಲ್ಲಿ ನಾಗರಹಾವುಗಳು ಸಹ ನಮ್ಮ ಮನೆಯೊಳಗೆ ಬರುತ್ತಿದ್ದುದು ಮಾಮೂಲು. ಪರೀಕ್ಷೆಗೆಂದು ಓದಲು ನಮಗೆ ಒಂದು ತಿಂಗಳು ರಜೆ ಕೊಡುತ್ತಿದ್ದರಲ್ಲ, ಆಗ ಉಪ್ಪರಿಗೆಯಲ್ಲಿ ಕುರ್ಚಿ ಹಾಕಿಕೊಂಡು ಓದುತ್ತಾ ಕೂರುವುದು ನನ್ನ ಅಭ್ಯಾಸ.

ಆ ಜಾಗದ ಪಕ್ಕದಲ್ಲಿ ಒಂದು ಪುಟ್ಟ ಕಿಟಕಿ. ಅಲ್ಲೇನೋ ಸರಿದಂತಾಯಿತು. ಏನೆಂದು ಅತ್ತ ನೋಡಿದರೆ, ನಾಗರಹಾವು! ಅಯ್ಯೋ ಇಲ್ಲಿಗೆ ಹಾವು ಬಂದಿದೆ ಎಂದು ಕೂಗಿದರೆ, ಅದು ನಿನಗೇನೂ ಮಾಡೊಲ್ಲ, ನಿನ್ನ ಪಾಡಿಗೆ ನೀನು ಓದಿಕೊ ಎನ್ನುತ್ತಿದ್ದರು ನಮ್ಮ ಅಮ್ಮಮ್ಮ. ನಮ್ಮ ಉಪ್ಪರಿಗೆ ಮಾಡಿನ ಜಂತಿಯ ಸಂದಿಯಲ್ಲಿ ಮನೆ ಮಾಡಿಕೊಂಡಿದ್ದ ಇಲಿಗಳನ್ನು ಹಿಡಿದು ತಿನ್ನಲು ಆ ನಾಗರಹಾವು ಬಂದಿತ್ತು; ಈ ರೀತಿ ಅವು ಓಡಾಡುವುದು ಮಾಮೂಲು ಎಂಬುದೇ ನಮ್ಮ ಹಿರಿಯರ ಅಭಿಪ್ರಾಯ.

ಹೀಗೆ ಹಲವು ಸಂದರ್ಭಗಳಲ್ಲಿ ಮನೆಯೊಳಗೆ, ಮನೆಯ ಸರಹದ್ದಿನಲ್ಲಿ ನಾಗರಹಾವುಗಳು ಓಡಾಡುವುದು ನಮ್ಮ ಬಾಲ್ಯದ ದಿನಚರಿಯ ಭಾಗವೇ ಆಗಿತ್ತು. ಒಂದು ಬಾರಿ, ಚಾವಣಿಯ ಮೇಲೆ ಬಂದಿದ್ದ ನಾಗರಹಾವು ನಿಧಾನವಾಗಿ ಅತ್ತಿತ್ತ ಸರಿದು, ಅಲ್ಲೇ ಒಂದು ವಯರಿನ ಮೇಲೆ ಇದ್ದ ಸೂರಕ್ಕಿಯ ಗೂಡಿನತ್ತ ಧಾವಿಸಿತು!

ಪಾಪ, ಮೊಟ್ಟೆ ಇಟ್ಟಿದ್ದವೋ ಏನೋ, ಎರಡು ಸೂರಕ್ಕಿಗಳು ಆ ಹಾವನ್ನು ನೋಡುತ್ತಾ, ಗೂಡಿನ ಬಳಿ ಆರ್ತನಾದ ಮಾಡುವಂತೆ ಕೂಗುತ್ತಿದ್ದವು. ಸೂರಕ್ಕಿ ಗೂಡಿನ ಬಳಿ ಬಂದ ಆ ಹಾವಿನ ವರ್ತನೆ, ಅದಕ್ಕೆ ಪ್ರತಿಯಾಗಿ ಸೂರಕ್ಕಿಗಳು ಕೂಗಿದ ರೀತಿ, ನಂತರ ಆ ಗೂಡನ್ನೇ ಅವು ಬಿಟ್ಟು ಹೋದ ಪರಿ, ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಈ ರೀತಿ ಒಂದು ನಾಗರಹಾವು, ಆಗಾಗ ನಮ್ಮ ಮನೆಯ ಮೇಲಕ್ಕೇರಿ, ಇಲಿಗಳನ್ನು ಹುಡುಕುತ್ತಾ ಓಡಾಡುತ್ತಿತ್ತು. ಪ್ರತಿ ಬೇಸಗೆಯಲ್ಲಿ 2-3 ಬಾರಿಯಾದರೂ ಹಾವಿನ ಗೃಹಸಂಚಾರ ಇರುತ್ತಿತ್ತು. ಊರಿನವರು ಯಾವುದೇ ಕಾರಣಕ್ಕೂ ನಾಗರ ಹಾವನ್ನು ಹೊಡೆಯುತ್ತಿರಲಿಲ್ಲವಾದ್ದರಿಂದ, ನಮ್ಮ ಹಳ್ಳಿ ಅವುಗಳ ಸಾಮ್ರಾಜ್ಯವಾಗಿತ್ತು ಎನ್ನಬಹುದು.

ಆ ಹಾವುಗಳನ್ನು ಪೂಜಿಸುತ್ತಿದ್ದ ಹಳ್ಳಿಯವರು, ಅವುಗಳಿಗೆ ರಾಜಮರ್ಯಾದೆ ನೀಡುತ್ತಿದ್ದುದಂತೂ ನಿಜ. ಮನೆಯ ಬಳಿ ಸುಳಿಯುವ ನಾಗರಹಾವನ್ನು, ಮನುಷ್ಯರ ರೀತಿ ಮಾತನಾಡಿಸುತ್ತಾ, ನೀನು ಎಂತಕೆ ಇಲ್ಲಿಗೆಲ್ಲಾ ಬರುವುದು? ಮಕ್ಕಳು-ಮರಿ ಓಡಾಡುವ ಜಾಗ ಇದು. ನಿನ್ನ ದಾರಿ ಹಿಡಿದು ಕೊಂಡು ಹೋಗು ಎಂದು ಕೈ ತೋರಿಸಿ, ಕೆಲವು ಬಾರಿ ನಮಸ್ಕರಿಸುತ್ತಿದ್ದರು. ಸ್ವಲ್ಪ ಸಮಯದ ಬಳಿಕ ನಾಗರಹಾವು ತನ್ನ ದಾರಿ ಹಿಡಿದು ಹೋಗುತ್ತಿತ್ತು!

ಅದಕ್ಕೆ ಮನುಷ್ಯರ ದನಿ ಅರ್ಥವಾಗುವ ಸಾಧ್ಯತೆ ಇಲ್ಲವಾದರೂ, ಅಮಾಯಕ ಹಳ್ಳಿಗರು, ಅಂಥ ತಮ್ಮ ಮಾತಿನಿಂದ ಅದನ್ನು ದೂರ ಕಳಿಸಬಹುದು ಎಂದು ನಿಜಕ್ಕೂ ನಂಬಿದ್ದರು. ಮನೆಯ ತುಸು ದೂರದಲ್ಲಿರುವ ನಾಗರ ಬನದಲ್ಲಿ, ನಾಗನ ಕಲ್ಲನ್ನು ಪೂಜಿಸಿ, ತನು ಹಾಕುವ ಪದ್ಧತಿಯೂ ನಮ್ಮ ಹಳ್ಳಿಯಲ್ಲಿತ್ತು.

ನಮ್ಮ ಮನೆಗೆ ತುಸು ದೂರದಲ್ಲಿದ್ದ ಒಂದು ನಾಗರ ಬನದಲ್ಲಿ ಇಂಥ ಪೂಜೆ ಇತ್ತು. ಅದರಾಚೆ ಹಕ್ಕಲು, ಕಾಡು; ಅಲ್ಲೊಂದು ಕಾಡ್ಯನ ಮನೆ ಇತ್ತು. ಅದಕ್ಕೆ ನಿಯತವಾಗಿ ಪೂಜೆ ಇಲ್ಲದಿದ್ದರೂ, ಅದಕ್ಕೆ ಸಂಬಂಧಿಸಿದ ಒಕ್ಕಲು, ವರ್ಷಕ್ಕೊಮ್ಮೆಯೋ, ಬೇರಾವುದೋ ಸಂದರ್ಭದಲ್ಲೋ ಬಂದು ಅಲ್ಲಿ ಪೂಜೆ ಮಾಡುತ್ತಿದ್ದುದನ್ನು ಕಾಣಬಹುದಿತ್ತು.

ನಾಗರಹಾವು ಮತ್ತು ಕಾಳಿಂಗ ಸರ್ಪ ಎರಡೂ ಪೂಜ್ಯ ಎಂಬ ಭಾವನೆ ಇರುವ ಮಲೆನಾಡು ಮತ್ತು ಕರಾವಳಿಯ ಬದುಕಿನಲ್ಲಿ, ಆ ಉರಗಗಳಿಗೆ ವಿಶಿಷ್ಟ ಸ್ಥಾನ ಇರುವುದಂತೂ ಖಚಿತ. ಇಂಥ ಸಂದರ್ಭದಲ್ಲಿ, ಯಾರಾದರೂ ಕಾಳಿಂಗ ಸರ್ಪಗಳನ್ನು ವಾಣಿಜ್ಯಕ ಉದ್ದೇಶಕ್ಕೆ ಬಳಸುತ್ತಿದ್ದಾರೆಂದರೆ, ಅಥವಾ ಕಾನೂನುಬಾಹಿರವಾಗಿ ಫೋಟೋ ಶೂಟ್‌ಗೆ ಬಳಸುತ್ತಿದ್ದಾರೆ ಎಂಬ ವಿಚಾರ ನಿಜವಾಗಿದ್ದಲ್ಲಿ, ಅದು ನಿಜಕ್ಕೂ ಖಂಡನಾರ್ಹ.

**- ಶಶಿಧರ** ಹಾಲಾಡಿ

